# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026



Grow with Us, Advertise in Hampi Times
Print & Digital Media
“Looking to bring your sales and services to readers Fingertips? HAMPI TIMES is the ideal platform”
Call:9448633038/email:hampitimes@gmail.com



ಸಂಪುಟ:03 • ಸಂಚಿಕೆ: 19 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 12.07.2025 • ಶನಿವಾರ • ಪುಟ:04 • ಬೆಲೆ:2
Volume:03 • Issue: 19 • PRGI No:KARKAN/2023/88055 • VIJAYANAGARA • 12.07.2025 • Saturday • Page:04 • Rs:2


### ವಿಶ್ವ ಜನಸಂಖ್ಯಾ ದಿನಾಚರಣೆ | ಜಿಲ್ಲಾ ಆರೋಗ್ಯಾಧಿಕಾರಿ ಡಾ.ಶಂಕರ್ ನಾಯ್ಕ ಹೇಳಿಕೆ

# ವಿಜಯನಗರ ಜಿಲ್ಲೆಯ ಜನಸಂಖ್ಯೆ 24.48 ಲಕ್ಷ

■ **ಹಂಪಿ ಟೈಮ್ಸ್ ಹೊಸಪೇಟೆ**

ಆರೋಗ್ಯಕರ ಜೀವನ ಮತ್ತು ಸಣ್ಣ ಕುಟುಂಬಗಳ ಪ್ರಾಮುಖ್ಯತೆ ಮತ್ತು ಜನಸಂಖ್ಯಾ ಸ್ಫೋಟದಿಂದಾಗುವ ಅಪಾಯಗಳು, ಕುಟುಂಬ ಯೋಜನೆಗೆ ಆದ್ಯತೆ, ಲಿಂಗ ಅಸಮಾನತೆ, ಬಡತನ, ಶಿಶು ಮರಣ, ಮಾನವ ಹಕ್ಕುಗಳು ಸೇರಿ ಇತರೆ ಸಂಗತಿಗಳ ಬಗ್ಗೆ ಜಾಗೃತಿ ಮೂಡಿಸುವುದು ವಿಶ್ವ ಜನಸಂಖ್ಯಾ ದಿನಾಚರಣೆಯ ಮುಖ್ಯ ಉದ್ದೇಶವಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಶಂಕರ್ ನಾಯ್ಕ ಹೇಳಿದರು.

ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಜಿಲ್ಲಾಡಳಿತ, ಜಿಪಂ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಏರ್ಪಡಿಸಿದ್ದ ವಿಶ್ವ ಜನಸಂಖ್ಯಾ ದಿನಾಚರಣೆಯನ್ನು ಉದ್ಘಾಟಿಸಿ ಶುಕ್ರವಾರ ಮಾತನಾಡಿದರು. ವಿಶ್ವದಾದ್ಯಂತ ಪ್ರತಿ ವರ್ಷ ಜುಲೈ 11 ರಂದು ವಿಶ್ವ ಜನಸಂಖ್ಯಾ ಆಚರಣೆ ಬಳಿಕ ಜನಸಂಖ್ಯೆ ಬೆಳವಣಿಗೆಯಲ್ಲಿ ಕುಸಿತ ಕಂಡುಬಂದಿದೆ. ಜಗತ್ತಿನಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯನ್ನು ನಿಯಂತ್ರಿಸುವುದು ಪ್ರಸ್ತುತ ದಿನಗಳಲ್ಲಿ ಅತಿ ದೊಡ್ಡ ಸವಾಲಾಗಿ ಪರಿಣಮಿಸಿದೆ. ಮೂರು ದಶಕಗಳಿಂದ ವಿಶ್ವ ಜನಸಂಖ್ಯಾ ದಿನವನ್ನು ಆಚರಿಸುತ್ತಾ ಬರಲಾಗುತ್ತಿದೆ. ವಿಶ್ವ ಜನಸಂಖ್ಯಾ ದಿನವನ್ನು ಜನಸಂಖ್ಯೆ ಹೆಚ್ಚಳದಿಂದ ಉಂಟಾಗುವ ಸಮಸ್ಯೆಗಳ ಬಗ್ಗೆ ಅರಿವು




ಮೂಡಿಸುವ ಉದ್ದೇಶ ದಿಂದ ಈ ದಿನವನ್ನು ಆಚರಣೆ ಮಾಡಲಾ ಗುತ್ತದೆ. 1987 ರ ಜುಲೈ 11 ರಂದು ವಿಶ್ವ ಜನಸಂಖ್ಯೆಯು 500 ಕೋಟಿಯನ್ನು ತಲುಪಿತ್ತು. ಇದರ ಜನಸಂಖ್ಯಾ ಹೆಚ್ಚಳದ ಪರಿಣಾಮಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ ವಿಶ್ವಸಂಸ್ಥೆಯು, ತನ್ನ ಅಂಗ ಸಂಸ್ಥೆಯಾದ 'ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ ಮಂಡಳಿ'ಯ ಮೂಲಕ 1989 ಜುಲೈ 11 ರಂದು ಮೊದಲ ಬಾರಿ ಜನಸಂಖ್ಯಾ ದಿನವನ್ನು ಆಚರಿಸಲಾಯಿತು. ಅಂದಿನಿಂದ ಇಚೇಗೆ ಜಗತ್ತಿನಾದ್ಯಂತ 200ಕ್ಕೂ ಹೆಚ್ಚು ದೇಶಗಳಲ್ಲಿ ಈ ದಿನವನ್ನು ಆಚರಿಸಿಕೊಂಡು ಬರಲಾಗುತ್ತದೆ. ಜನರಲ್ಲಿ ಲೈಂಗಿಕತೆ, ಸಂತಾನೋತ್ಪತ್ತಿ ಮತ್ತು ಆರೋಗ್ಯದ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕಾದ ಅನಿವಾರ್ತೆ ಇದೆ. ಜನಸಂಖ್ಯೆ ಏರಿಕೆಗೆ ಲಿಂಗ ಅಸಮಾನತೆ, ಬಾಲ್ಯವಿವಾಹ, ಆರೋಗ್ಯದ ಹಕ್ಕು, ಮಗುವಿನ ಆರೋಗ್ಯದ ಮೇಲಿನ ಪರಿಣಾಮಗಳು, ಕುಟುಂಬ ಯೋಜನೆ ಇಲ್ಲದೇ ಇರೋದು, ಮಾನವ ಹಕ್ಕುಗಳು ಪ್ರಮುಖ ಕಾರಣಗಳಾಗಿವೆ. 2025ರ ವಿಶ್ವ ಜನಸಂಖ್ಯೆ ಅಂದಾಜು 8.23 ಶತಕೋಟಿ ನೀರಿಕ್ಷೆ ಇದೆ. ಜನಸಂಖ್ಯಾ ನಿಯಂತ್ರಣ ಕೇವಲ ಸರ್ಕಾರಗಳು ಮತ್ತು ಇಲಾಖೆಗಳಿಂದಷ್ಟೇ ಸಾಧ್ಯವಿಲ್ಲ. ಸಾಮಾಜಿಕ ಹೊಣೆಗಾರಿಕೆಯಿಂದ ಸಾಧಿಸಬಹುದಾಗಿದೆ ಎಂದರು.

ಆರ್‌ಸಿಹೆಚ್ ಅಧಿಕಾರಿ ಡಾ.ಜಂಬಯ್ಯ ಮಾತನಾಡಿ, ವಿಜಯನಗರ ಜಿಲ್ಲೆ ಜನಸಂಖ್ಯೆ 2025 ರ ಅಂದಾಜು 24.48 ಲಕ್ಷಗಳು ಇದೆ. ಜನಸಂಖ್ಯೆ ನಿಯಂತ್ರಣವನ್ನು ತಾತ್ಕಾಲಿಕ ವಿಧಾನದಿಂದ ಅಂತರ ಕಾಪಾಡಿಕೊಂಡರೆ ಸದೃಢ ಮಕ್ಕಳು ಜನಿಸಲು ಅನುಕೂಲವಾಗುತ್ತದೆ. 'ತಾಯಿಯಾಗುವ ವಯಸ್ಸು : ದೇಹ ಮತ್ತು ಮನಸ್ಸಿನ ಸಿದ್ದತೆ' ತಾಯಂದಿರಿಗೆ ಹೆರಿಗೆ ಅಂತರದ ವಿಧಾನಗಳ ಬಗ್ಗೆ ಕಾಪರಟಿ, ನಿರೋಧ್, ಪಿಪಿಐಸಿಯುಡಿ, ಐಯುಡಿ ಮಾತ್ರೆಗಳ ಬಳಕೆ ಮತ್ತು ಚುಚ್ಚುಮದ್ದು(ಎಂಪಿಎ) ಹಾಗೂ ಮಹಿಳೆಯರಿಗೆ ಸಂತಾನ ಹರಣ ಶಸ್ತ್ರಚಿಕಿತ್ಸೆಯ ಲ್ಯಾಪ್ರೋಸ್ಕೋಪ ಹಾಗೂ ಪುರುಷರಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆ, ನೋ ಸ್ಕಾಲ್ ಪೆಲ್ ವ್ಯಾಸೆಕ್ಟಮಿ ಬಗ್ಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಕುಷ್ಟರೋಗ ನಿಯಂತ್ರಣ ಅಧಿಕಾರಿ ಡಾ.ರಾಧಿಕಾ, ಜಿಲ್ಲಾ ಆರೋಗ್ಯ ನೀರಿಕ್ಷಣಾಧಿಕಾರಿ ಎಂ.ಧರ್ಮನಗೌಡ, ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಆಡಳಿತ ಅಧಿಕಾರಿ ಡಾ.ನೂರ್ ಬಾಷಾ, ಶುಶ್ರೂಣಾಧಿಕಾರಿ ವೀಣಾ ಆರೋಗ್ಯ ಸಿಬ್ಬಂದಿ ಸಹದೇವ ಹಾಜರಿದ್ದರು.


## ಜು.16 ರಂದು ಸಮಗ್ರ ಮಕ್ಕಳ ರಕ್ಷಣಾ ಯೋಜನೆ ಕುರಿತು ಪ್ರಗತಿ ಪರಿಶೀಲನಾ ಸಭೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಮಕ್ಕಳ ರಕ್ಷಣಾ ಘಟಕ ವತಿಯಿಂದ ಜು.16 ರಂದು ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಬಾಲ್ಯವಿವಾಹ ಕುರಿತು ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ತಿಳಿಸಿದ್ದಾರೆ.




## ಆನಂದ ಬಾಣ








DIGITAL SIGNATURE
BEST SERVICES
E-Procurement Tender Submissions
E-Procu. Tender Registrations
E-Tender Filing / Submissions
INCOME TAX Digital Signature Certificate
EPF, ESIC Digital Signature Certificate
CONTACT US NOW!
9036931595
9480270581

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಫಲಿತಾಂಶ ಪ್ರಗತಿಗಾಗಿ
ಈ ಬಾರಿ ಫಲಿತಾಂಶ ನಮ್ಮದೆ
ನಮ್ಮೂರ ವಿದ್ಯಾರ್ಥಿ ನಮ್ಮ ಹೆಮ್ಮೆ
ನಿಮ್ಮೂರಲ್ಲೇ... ಸಂಜೆ ಸಾಮೂಹಿಕ ಓದು
ಶಾಲೆಗೊಂದು 625 ಅಭಿಯಾನಕ್ಕೆ ಕೈಜೋಡಿಸಿ
ವಾರ್ಡ್, ಗ್ರಾಮ ವ್ಯಾಪ್ತಿಯ ಸಮಾಜ ಸೇವಕರು, ಶಿಕ್ಷಣ ಪ್ರೇಮಿಗಳು, ಜನಪ್ರತಿನಿಧಿಗಳು, ಮಕ್ಕಳ ಶೈಕ್ಷಣಿಕ ಪ್ರಗತಿಗೆ ಸಹಕಾರ ನೀಡಿ, ಮಕ್ಕಳ ಭವಿಷ್ಯಕ್ಕೆ ಬೆಳಕಾಗಿ
ನಿಮ್ಮ ಸಹಕಾರದ ನಿರೀಕ್ಷೆಯಲ್ಲಿ...
SCAN to READ HAMPI TIMES E-PAPER
ಹಂಪಿ ಟೈಮ್ಸ್ ಬಳಗ, ವಿಜಯನಗರ
94486 33038


## SSLC ಹಂಪಿ ಟೈಮ್ಸ್ ಮಾರ್ಗದರ್ಶಿ

ಟಾಪರ್ ಆಗಲು ಇಂದಿನಿಂದಲೇ ಅಭ್ಯಾಸ ಮಾಡಿ

ಈ ಬಾರಿ ಫಲಿತಾಂಶ ನಮ್ಮದೆ
ನಮ್ಮೂರ ವಿದ್ಯಾರ್ಥಿ ನಮ್ಮ ಹೆಮ್ಮೆ
www.hampitimes.com / https://epaper.hampitimes.com
ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು


ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಹಿಂದಿ

Hampi Times Margadarshi 2025-26

**10 ನೇ ತರಗತಿ** **ಹಿಂದಿ**



### कश्मीरी सेब
(कहानी)




**I . अनुरूपता :**

1) कश्मीरी सेब बेचनेवाला : बेईमानी :: रेवडी बेचनेवाला : ------ ( ईमानदार )
2) नागपुर : संतरा :: कश्मीर : --- ( सेब )
3) सेब : फल :: गाजर : ------ ( सब्जी )
4) कपडा : नापना :: टोमाटो : ----- ( तौलना )

**II . एक वाक्य में उत्तर लिखिए ।**

5)प्रेमचंद जी का जी क्यों ललचा उठा ?
**रंगदार गुलाबी सेब को देखकर** प्रेमचंद जी का जी ललचा उठा |

6) प्रेमचंद जी चौक में क्यों गये थे ?
**दो- चार जरूरी चीजें खरीदने के लिए** प्रेमचंद जी चौक में गये थे |

7) लेखक प्रेमचंद जी को दूकान में क्या नजर आया ?
लेखक प्रेमचंद जी को दूकान में **रंगदार गुलाब सेब** नजर आया |

8) टोमाटो किसका आवश्यक अंग बन गया है ?
टोमाटो **भोजन का** आवश्यक अंग बन गया है |

9) रोज एक सेब खाने से किनकी जरूरत नहीं होगी ?
रोज एक सेब खाने से **डॉक्टरों की जरूरत** नहीं होगी |

**II. दो - तीन वाक्यों में उत्तर लिखिए ।**

10) कश्मीरी सेब पाठ से आपको क्या सीख मिलती है ?
कश्मीरी सेब पाठ से हमें यह सीख मिलती है कि - अगर खरीदारी करते समय सावधानी नही बरतें तो धोखा खाने की संभावना होती है ।

11) दूकानदार ने लेखक से क्या कहा ?
दूकानदार ने लेखक से इस तरह कहा कि -बाबूजी, बडे मजेदार सेब आए है, खास कश्मीर के आप ले जाएँ, खाकर तबीयत खुश हो जायेगी ।

12) गाजर के बारे में लेखक प्रेमचंद जी का राय क्या है ?
गाजर भी पहले गरीबों की पेट भरने की चीज थी । अमीर लोग तो उसका हलवा ही खाते थे ; मगर अब पता चला है कि गाजर में भी बहुत विटामिन है ; इसलिए गजर को भी मेजों पर स्थान मिलने लगा है ।

**IV. तीन – चार वाक्यों में उत्तर लिखिए ।**

13) मुहर्रम के मेले में लेखक प्रेमचंद जी का अनुभव बताइए ।
एक बार लेखक ने मुहर्रम के मेले में एक दूकानदार से एक पैसे की रेवडियाँ ली थी और पैसे की जगह अठन्नी दे आया था । घर आकर जब अपनी भूल मालूम हुई तो दूकानदार के पास दौडा गया । आशा नही थी कि वह अठन्नी लौटायेगा, पर लेकिन उसने प्रसन्नचित्त से अठन्नी लौटा दी और उलटे मुझसे क्षमा माँगी ।

ಮಾರ್ಗದರ್ಶಿ ಹಿಂದಿ ಶಿಕ್ಷಕರು: ಹೆಚ್.ತುಕಾರಾಮ್. ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಮಗಿಮಾವಿನಹಳ್ಳಿ ಹ.ಬೊ.ಹಳ್ಳಿ (ತಾ)


SHUBHA ADS
Print & Digital News Paper Advertisements
Contact: M: 9448633038
Scan For Digital Colourful
HAMPI TIMES E-paper

# ನ್ಯಾ.ಡಿ.ಕುನ್ಹಾ ವರದಿ ಸಲ್ಲಿಕೆ: ಜುಲೈ 17 ರ ಸಚಿವ ಸಂಪುಟದಲ್ಲಿ ವರದಿ ಬಗ್ಗೆ ಚರ್ಚಿಸಿ ತೀರ್ಮಾನ: ಸಿಎಂ



**ಹಂಪಿ ಟೈಮ್ಸ್ ಬೆಂಗಳೂರು**

ಜುಲೈ 17 ರಂದು ನಡೆಯಲಿರುವ ಸಚಿವ ಸಂಪುಟದಲ್ಲಿ ನ್ಯಾಯಮೂರ್ತಿ ಕುನ್ಹಾ ಅವರ ವರದಿಯನ್ನು ಮಂಡಿಸಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಶುಕ್ರವಾರ ವಿಧಾನಸೌಧದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು. ಆರ್.ಸಿ.ಬಿ ತಂಡದ ವಿಜಯೋತ್ಸವದ ಸಂದರ್ಭದಲ್ಲಿ ಕಾಲ್ತುಳಿತಕ್ಕೆ ಸಿಕ್ಕು ಹನ್ನೊಂದು ಜನ ಮೃತ ಪಟ್ಟಿದ್ದ ಹಿನ್ನೆಲೆಯಲ್ಲಿ ನಿವೃತ್ತ ನ್ಯಾಯಮೂರ್ತಿ ಜಸ್ಟೀಸ್ ಕುನ್ಹಾ ಅವರ ಅಧ್ಯಕ್ಷತೆಯಲ್ಲಿ ಸರ್ಕಾರ ರಚಿಸಿದ್ದ ಏಕ ವ್ಯಕ್ತಿ ಆಯೋಗವು ಇಂದು ಎರಡು ಸಂಪುಟಗಳಲ್ಲಿ ವರದಿಯಲ್ಲಿ ಸಲ್ಲಿಸಿದೆ ಎಂದರು.

ವರದಿಯಲ್ಲಿ ಮಾಡಿರುವ ಶಿಫಾರಸುಗಳ ಬಗ್ಗೆ ಚರ್ಚಿಸಿದ ನಂತರ ಸಂಪುಟ ನಿರ್ಧಾರ ಮಾಡಲಿದೆ ಎಂದರು. ನಾನು ವರದಿಯನ್ನು ಪೂರ್ಣವಾಗಿ ಓದಿಲ್ಲ. ಎಂದು ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದರು.

ಕಾಲ್ತುಳಿತ ಘಟನೆಗೆ ಸಂಬಂಧಪಟ್ಟಂತೆ ಪೊಲೀಸರ ಅಮಾನತ್ತನ್ನು ಸಿಎಟಿಯವರು ವಿರೋಧಿಸಿ ಆದೇಶಿಸಿರುವ ಬಗ್ಗೆ ಆಯೋಗದ ವರದಿಯಲ್ಲಿ ಪ್ರಸ್ತಾಪಿಸಲಾಗಿದೆಯೇ ಎಂಬುದರ ಬಗ್ಗೆ ಪ್ರತಿಕ್ರಿಯೆ ನೀಡಿ, ವರದಿಯನ್ನು ಸಚಿವ ಸಂಪುಟದಲ್ಲಿ ಚರ್ಚಿಸಿ, ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದರು.



**ನಟ ಯುವ ರಾಜಕುಮಾರ್ ಅವರು ಶುಕ್ರವಾರ ಕಾವೇರಿ ನಿವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾದರು. ಜುಲೈ 18 ರಂದು ತೆರೆ ಕಾಣಲಿರುವ ಯುವ ನಾಯಕತ್ವದ "ಎಕ್ಕ" ಸಿನಿಮಾದ ಯಶಸ್ಸಿಗೆ ಮುಖ್ಯಮಂತ್ರಿಗಳು ಶುಭ ಕೋರಿದರು.**

## ನೀವೂ ಬರೆಯಬಹುದು

ಹಂಪಿ **ಟೈಮ್ಸ್** ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.**

# ಭೂಮಿಗೆ ಚಂದ್ರನಿಲ್ಲದಿದ್ದರೆ......

ಬೇಸಿಗೆಯ ರಾತ್ರಿಯಲ್ಲಿ ಪ್ರತೀಕ್ಷ ತನ್ನ ತಂದೆಯೊಂದಿಗೆ ಮನೆಯ ಟೆರೇಸ್ ಮೇಲೆ ಮಲಗಿದ್ದಳು. ಆಗಸದಲ್ಲಿ ಪೂರ್ಣ ಚಂದ್ರನ ಪ್ರಕಾಶಮಾನವಾದ ಬೆಳಕು ಎಲ್ಲೆಡೆ ಹರಡಿತ್ತು. ಚಂದ್ರನನ್ನು ನೋಡುತ್ತಾ ಮಲಗಿದ್ದ ಪ್ರತೀಕ್ಷಳ ಮನದಲ್ಲಿ ಅನೇಕ ಪ್ರಶ್ನೆಗಳು ಮೂಡುತ್ತಿದ್ದವು. 'ಪಪ್ಪಾ ಇವತ್ತು ಪೂರ್ಣ ಚಂದ್ರ ಕಾಣುತ್ತಿದೆ ಅಲ್ವಾ?' ಎಂದಳು. "ಹೌದು ಇವತ್ತು ಹುಣ್ಣಿಮೆ ಇರೋದ್ರಿಂದ ಪೂರ್ಣ ಚಂದ್ರ ಕಾಣ್ತಾ ಇದೆ" ಎಂದರು ತಂದೆ. ಕೂಡಲೇ ಪ್ರತೀಕ್ಷಳಿಂದ ಇನ್ನೊಂದು ಪ್ರಶ್ನೆ ಬಂತು. 'ಪಪ್ಪಾ ನಮಗೆ ಚಂದ್ರ ಯಾಕೆ ಬೇಕು? ಚಂದ್ರನಿಲ್ಲದಿದ್ದರೆ ಏನಾಗ್ತಿತ್ತು?' ಎಂದಳು. ಅದಕ್ಕೆ ತಂದೆ ನಿಧಾನವಾಗಿ ಎಲ್ಲವನ್ನೂ ವಿವರಿಸಿದರು.

ಭೂಮಿಯ ಉಗಮದಿಂದ ಇಂದಿನವರೆಗೂ ಭೂಮಿ ಹಾಗೂ ಚಂದ್ರನ ನಡುವೆ ಅವಿನಾಭಾವ ಸಂಬಂಧ ಇದೆ. ಪ್ರತಿಯೊಂದು ಮತ ಧರ್ಮವೂ ಭೂಮಿಯ ಚಂದ್ರನನ್ನು ಆರಾಧಿಸುತ್ತದೆ. ಸೂರ್ಯನ ಬೆಳಕು ಮರೆಯಾಗಿ ಕತ್ತಲೆ ಆವರಿಸಿದೊಡನೆ ಚಂದ್ರನ ಬೆಳಕಿಗಾಗಿ ಮನಸ್ಸು ಹುಡುಕುತ್ತದೆ. ಚಂದ್ರ ಕೇವಲ ಭೌತಿಕ ವಸ್ತುವಾಗಿ ಅಲ್ಲ, ಬೌದ್ಧಿಕ ಬಿಂಬವಾಗಿಯೂ ನಮ್ಮ ಜೀವನದಲ್ಲಿ ಹಾಸು ಹೊಕ್ಕಾಗಿದ್ದಾನೆ. ಕಾಲ ಗಣನೆ ಸೇರಿದಂತೆ ಬಹುತೇಕ ಲೆಕ್ಕಾಚಾರವು ಚಂದ್ರನ ಇರುವನ್ನು ಅವಲಂಬಿಸಿದೆ. ಎಲ್ಲಾ ಹಂತದ ವಯೋಮಾನದವರಿಗೂ ಚಂದ್ರ ಒಬ್ಬ ಆಪ್ತ ಗೆಳೆಯ, ಸಂಗಾತಿ. ರಾತ್ರಿ ವೇಳೆ ಚಿಕ್ಕಮಕ್ಕಳು ಊಟ ಮಾಡಲು ರಂಪ ಮಾಡಿದಾಗ ತಾಯಿ ಚಂದ್ರನನ್ನು ತೋರಿಸಿ ಬಾಯಿಗೆ ತುತ್ತು ಇಟ್ಟಿರುವುದನ್ನು ಮರೆಯಲು ಸಾಧ್ಯವೇ? ಚಂದ್ರನಿಲ್ಲದೇ ಜೋಗುಳದ ಲಾಲಿಯಿಲ್ಲ. ಕವಿಗಳಿಗೂ ಮತ್ತು ಪ್ರೇಮಿಗಳಿಗೂ ಚಂದ್ರ ಒಂದು ಉತ್ತಮ ವೇದಿಕೆ. ಮನಸ್ಸಿನ ಎಲ್ಲಾ ನೋವು ನಲಿವುಗಳಿಗೆ ಚಂದ್ರ ಮಲಾಮು ಆಗಿದ್ದಾನೆ. ಬಹುತೇಕ ನಮ್ಮ ಸಂಪ್ರದಾಯಗಳು ಚಂದ್ರನ ಪೂಜೆಯಿಂದ ಪ್ರಾರಂಭವಾಗುತ್ತವೆ. ಕೆಲ ಹಬ್ಬಗಳಂತೂ ಚಂದ್ರನ ಹೆಸರಿನೊಂದಿಗೆ ಮಿಳಿತಗೊಂಡಿವೆ. ಹೀಗೆ ನಮ್ಮ ಬದುಕಿನ ಭಾಗವಾಗಿರುವ ಚಂದ್ರ ಇಲ್ಲದಿದ್ದರೆ ಏನಾಗುತ್ತಿತ್ತು? ಎಂಬ ಪ್ರಶ್ನೆ ಮೂಡಿರುವುದು ಸಹಜವೇ ಆಗಿದೆ.

4.5 ಶತಕೋಟಿ ವರ್ಷಗಳ ಹಿಂದೆ ನಡೆದ ಮಹಾಸ್ಫೋಟದಿಂದ ನಮ್ಮ ಸೌರವ್ಯೂಹ ರೂಪುಗೊಂಡಿದೆ. ಪ್ರತಿಯೊಂದು ಗ್ರಹವೂ ಸೂರ್ಯನನ್ನು ಕೇಂದ್ರವಾಗಿರಿಸಿಕೊಂಡು ಸುತ್ತತೊಡಗಿದವು. ಅದರಲ್ಲಿ ಭೂಮಿಯೂ ಒಂದು. ಭೂಮಿಯನ್ನು ಆಧಾರವಾಗಿಟ್ಟು ಕೊಂಡ ಚಂದ್ರ ಉಪಗ್ರಹವಾಗಿ ರೂಪುಗೊಂಡಿತು. ಚಂದ್ರನು ಭೂಮಿಯಿಂದ ಸರಾಸರಿ 3,84,399 ಕಿ.ಮೀ. ದೂರ ದಲ್ಲಿದ್ದಾನೆ. ಇಷ್ಟೊಂದು ದೂರದಲ್ಲಿದ್ದರೂ ಚಂದ್ರ ಮತ್ತು ಭೂಮಿಯ ನಡುವೆ ಪರಸ್ಪರ ಅವಿನಾಭಾವ ಸಂಬಂಧ ಉಳಿದುಕೊಂಡಿದೆ. ಈ ಸಂಬಂಧವು ಅನೇಕ ವಿಧದಲ್ಲಿ ನಮಗೆ ಗೋಚರಿಸುತ್ತದೆ. ಭೂಮಿ ತನ್ನ ಅಕ್ಷದ ಮೇಲೆ 23.4 ಡಿಗ್ರಿಗಳಷ್ಟು ಓರೆಯಾಗಿರಲು ಚಂದ್ರನ ಸೆಳೆತವೇ ಕಾರಣ. ಹಾಗೆಯೇ ಭೂಮಿಯಲ್ಲಿನ ಸಾಗರಗಳ ಉಬ್ಬರವಿಳಿತಕ್ಕೆ ಚಂದ್ರನೇ ಕಾರಣ. ಅಂತೆಯೇ ಭೂಮಿಯ ಕಾಲಮಾನ ನಿರ್ಧರಣೆಯಲ್ಲಿ, ಹವಾಮಾನ ಮತ್ತು ವಾಯುಗುಣಗಳ ಲೆಕ್ಕಾಚಾರದಲ್ಲಿಯೂ ಚಂದ್ರನ ಇರುವಿಕೆ ಅತ್ಯಂತ ಮಹತ್ವದ್ದು.



**ಆರ್.ಬಿ.ಗುರುಬಸವರಾಜ**
**ಶಿಕ್ಷಕರು, ಹ.ಬೊ.ಹಳ್ಳಿ**
Scan For Digital Colourful
HAMPI TIMES E-paper




ವಾಸ್ತವವಾಗಿ ಚಂದ್ರನು ಪ್ರತಿದಿನ ನಮ್ಮನ್ನು ಸ್ವಲ್ಪಮಟ್ಟಿಗೆ ನಿಧಾನಗೊಳಿಸುತ್ತಿದ್ದಾನೆ. ಅಂದರೆ ಚಂದ್ರನ ಇರುವಿಕೆಯು ಭೂಮಿಯ ತಿರುಗುವಿಕೆಯನ್ನು ನಿಧಾನಗೊಳಿಸಲು ಸಹಾಯ ಮಾಡುತ್ತದೆ. ಚಂದ್ರನಿಲ್ಲದಿದ್ದರೆ ಭೂಮಿಯ ತಿರುಗುವಿಕೆಯು ವೇಗಗೊಳ್ಳುತಿತ್ತು. ಇದು ಜಿಜ್ಞಾಸೆಯಂತೆ ತೋರುತ್ತದೆಯಾದರೂ, ಅನೇಕ ರೀತಿಯ ಪರಿಣಾಮಗಳಿಗೆ ಕಾರಣವಾಗುತ್ತಿತ್ತು. ಗಾಳಿ ಮತ್ತು ಬಿರುಗಾಳಿಗಳ ಪ್ರಮಾಣ ಹೆಚ್ಚಾಗುತ್ತಿತ್ತು. ಬಹುಶಃ ಚಂದ್ರನು ಭೂಮಿಯ ವೇಗವನ್ನು ನಿಧಾನಗೊಳಿಸಿದ್ದರಿಂದ ನಮ್ಮ ಗ್ರಹದಲ್ಲಿ ಜೀವನವು ವಿಕಸನಗೊಂಡಿರಬಹುದು. ಚಂದ್ರನಿಲ್ಲದಿದ್ದರೆ ಭೂಮಿಯಲ್ಲಿ ಕೆಲವೇ ಗಂಟೆಗಳ ಹಗಲು ಮತ್ತು ಕೆಲವೇ ಗಂಟೆಗಳ ಕತ್ತಲೆ ಆವರಿಸುತ್ತಿತ್ತು. ಇದರಿಂದ ಸಸ್ಯಗಳು ಮತ್ತು ಪ್ರಾಣಿಗಳು ವಿಕಸನ ಹೊಂದಲು ಸಾಧ್ಯವಾಗುತ್ತಿರಲಿಲ್ಲವೇನೋ?

ಭೂಮಿಗೆ ಚಂದ್ರ ಇರುವುದರಿಂದ ಸೌಮ್ಯವಾದ ಋತುಗಳು ಮತ್ತು ಪರಿಸರಗಳಿಗೆ ಕಾರಣವಾಗುವ 23ಡಿಗ್ರಿ ಓರೆಯನ್ನು ಸ್ಥಿರಗೊಳಿಸಿಕೊಳ್ಳಲು ಸಾಧ್ಯವಾಗಿದೆ. ಶೂನ್ಯ ಡಿಗ್ರಿ ಓರೆಯೊಂದಿಗೆ ನಾವು ಕೆಲವು ನಿಮಿಷಗಳ ಸೂರ್ಯನನ್ನು ನೋಡಲಾಗುತ್ತಿರಲಿಲ್ಲ ಅಥವಾ ಯುರೇನಸ್‌ನಂತೆ 97ಡಿಗ್ರಿ ಓರೆಯೊಂದಿಗೆ ನಾವು 42 ವರ್ಷಗಳ ನಿರಂತರ ಸೂರ್ಯನ ಬೆಳಕು ಮತ್ತು ನಂತರದ 42 ವರ್ಷಗಳ ಕತ್ತಲೆಯಲ್ಲಿ ಕಳೆಯಬೇಕಾಗುತ್ತಿತ್ತು.

ಇಷ್ಟೊಂದು ಉಪಕಾರಿಯಾದ ಚಂದ್ರ ನಮ್ಮೊಂದಿಗೆ ಇಲ್ಲದಿದ್ದರೆ ಏನಾಗುತ್ತಿತ್ತುಎನ್ನುವುದುವಿಜ್ಞಾನವನ್ನುಮೀರಿದಪ್ರಶ್ನೆಯಾಗಬಹುದು. ಚಂದ್ರನು ನಮ್ಮನ್ನು ಯೋಗ್ಯವಾದ ವೇಗದಲ್ಲಿ ಮತ್ತು ಯೋಗ್ಯವಾದ ಓರೆಯಲ್ಲಿರಿಸಿದ್ದಾನೆ. ಹಾಗೆಯೇ ನಮಗೆ ಸರಿಯಾಗಿ ನೀರಿರುವಂತೆ ಮಾಡುತ್ತಾನೆ ಎಂದು ಹೇಳುತ್ತಾ ತಂದೆ ಧೀರ್ಘವಾಗಿ ಉಸಿರೆಳೆದುಕೊಂಡು ನೀರು ಕುಡಿಯಲು ಟೆರೇಸ್‌ನಿಂದ ಕೆಳಗೆ ಇಳಿದರು. ಚಂದ್ರನನ್ನು ನೋಡುತ್ತಾ ಮಲಗಿದ್ದ ಪ್ರತೀಕ್ಷ ತಂದೆ ಹೇಳಿದ ಮಾತುಗಳನ್ನು ಮೆಲುಕು ಹಾಕುತ್ತಾ ಮೆಲ್ಲನೇ ತಂದೆಯ ಜೊತೆಗೆ ಕೆಳಗಿಳಿದಳು.

# ನೆನಪಿಸಿಕೋ... ನಿನ್ನನ್ನು ಬೆಳೆಸಿದವರು ಯಾರು?

ಪ್ರತಿಯೊಬ್ಬ ವ್ಯಕ್ತಿಯು ತನ್ನ ಬದುಕಿನಲ್ಲಿ ಪಾಲಕರ ಹಾರೈಕೆ, ಸ್ನೇಹಿತರೊಂದಿಗೆ ಆಟ ಪಾಠ, ವಿದ್ಯೆ, ಉದ್ಯೋಗ, ಸಾಂಗತ್ಯ ಮಕ್ಕಳು ಎಂದು ತನ್ನ ಬದುಕಿನಲ್ಲಿ ಹಲವಾರು ಮಜಲುಗಳನ್ನು ಕಾಣುತ್ತಾನೆ. ಎಷ್ಟೋ ಬಾರಿ ಔದ್ಯೋಗಿಕವಾಗಿ ಆರ್ಥಿಕವಾಗಿ, ಉನ್ನತ ಸ್ಥಾನಕ್ಕೆ ಹೋದಾಗ ಆತ ಕೆಲ ಸಂಗತಿಗಳನ್ನು ಮರೆತುಬಿಡುತ್ತಾನೆ. ಎಲ್ಲವೂ ತಾನೇ ತನ್ನಿಂದ ಎಂಬ ಅಹಂಭಾವ ಆತನಲ್ಲಿ ಉಂಟಾಗುತ್ತದೆ. ಅಂತಹ ಸಮಯದಲ್ಲಿ ಆತ ನೆನಪಿಟ್ಟುಕೊಳ್ಳಬೇಕಾದ ಕೆಲವು ವಿಷಯಗಳು ಹೀಗಿವೆ.

ತನ್ನನ್ನು ಬೆಳೆಸಿದ್ದು ತನ್ನ ಪಾಲಕರು. ತನ್ನೆಲ್ಲ ಬೇಕು ಬೇಡಗಳನ್ನು ಅವಶ್ಯಕತೆಗಳನ್ನು ಪೂರೈಸಿದ್ದು ಪಾಲಕರು. ಹಗಲು ರಾತ್ರಿ ತಾವು ಎಚ್ಚರವಿದ್ದು ಮಕ್ಕಳನ್ನು ಬೆಳೆಸಿದವರು ತನ್ನ ಪಾಲಕರು. ತಮ್ಮ ಕಷ್ಟಗಳನ್ನು ತಮಗೆ ಮಾತ್ರ ಇಟ್ಟುಕೊಂಡು ಮಕ್ಕಳಿಗೆ ಸುಖವನ್ನು ಧಾರೆ ಎರೆದವರು. ಮಕ್ಕಳ ಇಚ್ಛಿಸಿದ ಎಲ್ಲವನ್ನು ತಂದುಕೊಟ್ಟವರು ಅವರ ಪಾಲಕರು. ಮನುಷ್ಯನ ಮೂಲಭೂತ ಅವಶ್ಯಕತೆಗಳಾದ ಆಹಾರ, ಬಟ್ಟೆ, ಸೂರು ಮತ್ತು ವಿದ್ಯೆ ದಯಪಾಲಿಸಿ ತನ್ನ ಕಾಲ ಮೇಲೆ ತಾನು ನಿಲ್ಲುವಂತೆ ಬೆಳೆಸಿದವರು ಅವರೇ ತನ್ನ ಪಾಲಕರು.

ತಾವಿಷ್ಟಪಟ್ಟ ಪುಸ್ತಕವನ್ನು ಜತನವಾಗಿ ಇಟ್ಟುಕೊಳ್ಳುವಂತೆ, ರೆಪ್ಪೆಯು ಕಣ್ಣನ್ನು ಕಾಯುವಂತೆ ತಮ್ಮ ಮಕ್ಕಳ ಕಾಳಜಿ ಮಾಡಿದವರು. ಹೊತ್ತು ಹೊತ್ತಿಗೆ ಹೊಟ್ಟೆ ನೆತ್ತಿಯ ನೋಡಿದವರು, ಆರೋಗ್ಯವನ್ನು ಕಾಯ್ದವರು, ಚಾಕರಿ ಮಾಡಿ ಸೋತರೂ ಮುಖದಲ್ಲಿ ಹುಸಿನಗೆ ಚಲ್ಲಿದವರು.

ಧಾವಂತದಿಂದಲೇ ಎದ್ದು ಲಗುಬಗೆಯಿಂದ ಅಡುಗೆ ತಿಂಡಿಗಳನ್ನು ಮಾಡಿ ಮಕ್ಕಳನ್ನು ಎಬ್ಬಿಸಿ ಅವರನ್ನು ಅನುನಯಿಸುತ್ತಲೇ ಅವರ ಹಲ್ಲುಜ್ಜಿಸಿ ಮುಖ ತೊಳೆಸಿ, ಹಾಲು ಕುಡಿಸಿ ಸ್ನಾನ ಮಾಡಿಸಿ ತಿಂಡಿ ತಿನಿಸಿ ಪುಸ್ತಕಗಳನ್ನು ಹೊಂದಿಸಿ ಕೊಟ್ಟು ಶಾಲೆಗೆ ಕಳಿಸಿದವರು. ಸಂಜೆ ಮನೆಗೆ ಬರುವಾಗ ಬಾಗಿಲಲ್ಲಿ ಕಾಯ್ದು ಅಪ್ಪಿದವರು. ಮುಂದೆ ಮಕ್ಕಳು ದೊಡ್ಡವರಾಗಿ ತಮ್ಮ ಕೆಲಸಗಳನ್ನು ತಾವೇ ಮಾಡಿಕೊಂಡಾಗ ಸಂತಸ ಪಟ್ಟವರು, ನಿಮ್ಮ ಏಳಿಗೆಗಾಗಿ ತಮ್ಮ ಹಗಲಿರುಳು ಸವೆಸಿದವರು.



**ವೀಣಾ ಹೇಮಂತಗೌಡ ಪಾಟೀಲ್**
**ಲೇಖಕರು, ಮುಂಡರಗಿ, ಗದಗ**
Scan For Digital Colourful
HAMPI TIMES E-paper



ಮುಂದೆ ಅದೆಷ್ಟೇ ದೊಡ್ಡವನಾದರೂ ನೀನು ತಾಯಿಯ ಮಡಿಲನ್ನು ಮರೆಯಬೇಡ ತಂದೆಯ ಪ್ರೀತಿಯ ಕಡೆಗಣಿಸಬೇಡ, ಒಡಹುಟ್ಟಿದವರ ಸ್ನೇಹಿತರ ಕಲಿಸಿದ ಗುರುಗಳ ತೊರೆಯದಿರು, ಹುಟ್ಟಿದ ಮನೆಯ ಚಂದದ ಮಧುರ ನೆನಪುಗಳು ನಿನ್ನಲ್ಲಿರಲಿ. ಅದಷ್ಟೇ ದೊಡ್ಡ ಹುದ್ದೆಯಲ್ಲಿ ನೀನಿದ್ದರೂ ನೀನು ಒಂದು ಮನೆಯ ಹೆಮ್ಮೆಯ ಕುಡಿಯಾಗಿರು. ನಿನ್ನ ನೆನಪಾದಾಗ ಅವರ ಮುಖ ಅರಳುವಂತೆ ಬದುಕಿನಲ್ಲಿ ಸಾಗುತ್ತಿರು.

ನಿನ್ನನ್ನು ಕಟೆದು ಶಿಲ್ಪಿಯನ್ನಾಗಿಸಲು ಅವರು ಪಟ್ಟ ಶ್ರಮವನ್ನು ಅವರೆಂದೂ ನಿನಗೆ ಹೇಳರು, ಅವರು ತ್ಯಾಗದ ಪರಿಯನ್ನು ನೀನೆಂದೂ ಅರಿಯಲಾರೆ. ನಿನ್ನ ಉತ್ತಮ ಇಂದುಗಳಿಗೆ ತಮ್ಮ ನಿನ್ನೆಗಳನ್ನು ಕಳೆದುಕೊಂಡವರು. ತಮ್ಮ ಶ್ರಮ, ತಾಳ್ಮೆ, ಕಷ್ಟಗಳನ್ನು ಅವರೊಂದು ಹೇಳಿಕೊಳ್ಳುವುದಿಲ್ಲ ನಿಜ, ಆದರೆ ಅವರ ಕಣ್ಣಲ್ಲಿ ನೋವು,ಪರಿತಾಪ ಮತ್ತು ಪಶ್ಚಾತ್ತಾಪಗಳು ಮೂಡದಿರುವಂತೆ ನಿನ್ನ ವರ್ತನೆ ಇರಲಿ.

ಅವರೇನೇ ಮಾಡಿದರೂ ಅದು ನಿನಗಾಗಿ ಮಾತ್ರ. ಪ್ರಕೃತಿ ಸಹಜವಾಗಿ ಯಾವುದೇ ಸದ್ದು ಗದ್ದಲಗಳಿಲ್ಲದೆ, ಅತೀವ ಪ್ರೀತಿಯಿಂದ ನಂಬಿಕೆಯಿಂದ ನಿನಗಾಗಿ ತಮ್ಮದೆಲ್ಲವನ್ನು ಕೊಟ್ಟವರು. ಜನರ ಮನ್ನಣೆ ಸಿಗಲಿ ಎಂದು ಅವರು ಬಯಸಿಲ್ಲ ನಿಜ ಚಪ್ಪಾಳೆಯ ಮೂಲಕ ಪ್ರೀತಿಯನ್ನು ಕೊಡಲಿ ಎಂದು ಕೇಳಿಲ್ಲ ಆದರೆ ನಿಮ್ಮ ಹಿಡಿ ಪ್ರೀತಿಗಾಗಿ, ಪುಟ್ಟ ಗೌರವಕ್ಕಾಗಿ ಅವರು ಕಾದಿಹರು. ಅವರ ಕಾತರದ ಪ್ರೀತಿಗೆ ಒಡನಾಟಕ್ಕೆ ನೀನು ಅದೆಷ್ಟು ಕೃತಜ್ಞನಾಗಿದ್ದರೂ ಕಮ್ಮಿಯೇ..... ಅವರನ್ನೆಂದೂ ಕಾಯಿಸದಿರು, ನೋಯಿಸದಿರು ಬೇಯಿಸದಿರು.

ನೀನು ಪಾಲಕನಾಗುವವರೆಗೆ ನಿನ್ನ ಪಾಲಕರ ಪ್ರೀತಿ, ಕಾಳಜಿ, ಶ್ರಮ ಮತ್ತು ತೀರದ ಜವಾಬ್ದಾರಿಗಳ ಅರಿವು ನಿನಗಾಗುವುದು. ನನಗಾಗಿ ಇಷ್ಟೆಲ್ಲ ನನ್ನ ಪಾಲಕರು ಮಾಡಿದಾಗಲೇ ನಾನು ಒಬ್ಬ ಮನುಷ್ಯನಾಗಿದ್ದು ಎಂಬ ಜ್ಞಾನೋದಯವಾಗುವುದು. ಎಲ್ಲ ಪಾಲಕರು ಮಾಡಿರುವುದನ್ನೇ ನೀವು ಮಾಡಿದ್ದೀರಿ ಅದರಲ್ಲಿ ಹೆಚ್ಚುಗಾರಿಕೆ ಏನು? ಎಂದು ಪ್ರಶ್ನಿಸದಿರಿ. ಅತ್ಯಂತ ಕಡಿಮೆ ಅನುಕೂಲಗಳಲ್ಲಿ ಅವರು ನಿಮ್ಮನ್ನು ಯಾವ ತೊಂದರೆಗಳು ಕಾಡದಂತೆ ಬೆಳೆಸಿದ್ದಾರಲ್ಲವೇ? ಹಾಗೆ ಬೆಳೆಸಲು ಪಟ್ಟ ಶ್ರಮದ ಅರಿವು ನಿಮಗಾಗುವುದು ನೀವು ಕೂಡ ಪಾಲಕತ್ವದ ಆ ಸುರಂಗವನ್ನು ಹೊಕ್ಕಾಗಲೇ.

ಪಾಲಕರು ನಮ್ಮ ಜೊತೆ ಇದ್ದಾಗ ಕಡೆಗಣಿಸಿ ನಂತರ ಅವರನ್ನು ನೆನೆಯುವುದು ಬೇಡ. ನಿನ್ನನ್ನು ನೀನು ನೋಡಿಕೊಳ್ಳಲು ಸಾಧ್ಯವಾಗದ ಸಮಯದಲ್ಲಿ ಅವರು ನಿನ್ನ ಆರೈಕೆ ಮಾಡಿದ್ದಾರೆ. ಸಾಕಿ ಸಲಹಿದ್ದಾರೆ, ಪ್ರೀತಿಯಿಂದ ಪೊರೆದಿದ್ದಾರೆ..... ಇದೀಗ ನಿನ್ನ ಸರದಿ. ಅವರು ದೈಹಿಕವಾಗಿ ಅನಾರೋಗ್ಯಕ್ಕೆ ಈಡಾದಾಗ, ಭಾವನಾತ್ಮಕವಾಗಿ ಪ್ರೀತಿಯ ಕೊರತೆಯಿಂದ ಬಳಲಿದಾಗ, ಆರ್ಥಿಕವಾಗಿ ಹಣದ ತೊಂದರೆಗೆ ಈಡಾದಾಗ ಅವರನ್ನು ಕೈ ಹಿಡಿದು ಮುನ್ನಡೆಸಬೇಕಾದದ್ದು ನಿನ್ನ ಜವಾಬ್ದಾರಿ... ಕರ್ತವ್ಯ ಕೂಡ.

ಮುಂದೆ ಅವರಿಲ್ಲದ ಸಮಯದಲ್ಲಿ ಮಾಡುವ ಪ್ರತಿ ಕೆಲಸದಲ್ಲೂ ಅವರ ಛಾಯೆಯನ್ನು ನೀನು ಹುಡುಕುವೆ. ಅವರ ಮಾತುಗಳನ್ನು ಕೇಳ ಬಯಸುವೆ, ಅವರ ಪ್ರೀತಿಗಾಗಿ ಆಶಿಸುವೆ.... ಅದು ಮುಂದಿನ ಮಾತು ನಿಜ ಈಗ ಅವರ ನಿನ್ನ ಕಣ್ಣ ಮುಂದೆ ಇರುವಾಗಲೇ ನಿನ್ನ ಪ್ರೀತಿಯನ್ನು ತೋಡಿಕೋ ಕಾಳಜಿಯನ್ನು ವ್ಯಕ್ತಪಡಿಸು ಗೌರವದಿಂದ ವರ್ತಿಸು. ಅವರೆಂದೂ ನಿನ್ನ ಮುಂದೆ ದೀನರಾಗದಿರಲಿ ಎಂದು ಪ್ರಾರ್ಥಿಸು.

ಆಗ ನಿನಗೆ ಅರಿವಾಗುವುದು ನಿನ್ನ ಹೃದಯದ ಅಂತರಾಳದಲ್ಲಿ, ಬೆಚ್ಚಗಿನ ಸ್ಪರ್ಶದಲ್ಲಿ, ಹುಣ್ಣಿಮೆಯ ಬೆಳದಿಂಗಳಂತಹ ಅವರ ಪ್ರೀತಿ.... ಅವರು ಕೇವಲ ನಿನ್ನ ಬದುಕಿನ ಭಾಗವಾಗಿರಲಿಲ್ಲ ನಿನ್ನ ಬದುಕೇ ಅವರಾಗಿದ್ದರು...... ನಿನ್ನ ಬದುಕಿನ ಪುಟ್ಟ ಸಸಿ ಹೆಮ್ಮರವಾಗಿ ಬೆಳೆದು ಆಕಾಶವನ್ನು ಚುಂಬಿಸಲು ಕಾರಣವಾದ ಮೂಲಬೇರು ಅವರಾಗಿದ್ದರು. ಕಣ್ಣಿಗೆ ಕಾಣಿಸದೆ ಹೋದರೂ ಆಳದಲ್ಲಿ ಅವರ ಹಿಡಿತದ ಸುಖದಲ್ಲಿ ನೀನು ಗಗನಚುಂಬಿಯಾಗಲು ಮೂಲಕ ಕಾರಣ ಅವರೇ. ಅವರೇ ನಿನ್ನ ಹೆತ್ತವರು. ಅವರನ್ನೆಂದೂ ಮರೆಯದಿರು. ಬದುಕೆಂಬ ಈ ಸಮುದ್ರದಲ್ಲಿ ನಿನ್ನ ಅಸ್ತಿತ್ವದ ನಾವೆಗೆ ದಿಕ್ಸೂಚಿಯಾದವರು ಅವರೇ ನಿನ್ನ ಹೆತ್ತವರು.... ಅವರನ್ನೆಂದೂ ಕೊರಗಿಸದಿರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ವರದಿಗಳು ವಾಸ್ತವಕ್ಕೆ ಹತ್ತಿರವಾಗಿರಲಿ

## ಶಾಸಕ ಡಾ.ಎನ್.ಟಿ.ಶ್ರೀನಿವಾಸ ಹೇಳಿಕೆ | ಸುಳ್ಳು ಸುದ್ದಿಗಳು ಅಭಿವೃದ್ಧಿಗೆ ಮಾರಕ




**ಹಂಪಿ ಟೈಮ್ಸ್ ಕೂಡ್ಲಿಗಿ**

ಮಾಧ್ಯಮಗಳು ಸಮಾಜದ ಸಾಮಾಜಿಕ ಬದಲಾವಣೆಯ ಕನ್ನಡಿಯಾಗಿ ಕೆಲಸ ಮಾಡಲಿ ಎಂದು ಶಾಸಕ ಡಾ. ಎನ್.ಟಿ. ಶ್ರೀನಿವಾಸ್ ಹೇಳಿದರು.

ಪಟ್ಟಣದ ಜ್ಞಾನ ಭಾರತಿ ಸಮೂಹ ವಿದ್ಯಾ ಸಂಸ್ಥೆಯಲ್ಲಿ ತಾಲೂಕು ಕಾರ್ಯ ನಿರತ ಪತ್ರಕರ್ತರ ಸಂಘದ ವತಿಯಿಂದ ಏರ್ಪಡಿಸಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ದೇಶದಲ್ಲಿ ಸಂವಿಧಾನ ನೀಡಿರುವ ಅಭಿವ್ಯಕ್ತಿ ಸ್ವತಂತ್ರದ ಮತ್ತೊಂದು ರೂಪವೇ ಮಾಧ್ಯಮಗಳು. ಮಾಧ್ಯಮವನ್ನು ಪ್ರಜಾಪ್ರಭುತ್ವ ವ್ಯವಸ್ಥೆಯ 4ನೇ ಅಂಗ ಎಂದು ಪರಿಗಣಿಸಲಾಗುತ್ತದೆ. ಶಾಸಕಾಂಗ, ಕಾಯಾರ್ಂಗ, ನ್ಯಾಯಾಂಗ ಈ ಮೂರು ಅಂಗಗಳ ಉತ್ತಮ ಸಾಧನೆಗಳ ಕಾರ್ಯ ವೈಖರಿಗಳನ್ನು ಜನರಿಗೆ ತಿಳಿಸುವ ಕೆಲಸವನ್ನು ಪತ್ರಿಕೆಗಳು ವಸ್ತುನಿಷ್ಠವಾಗಿ ಮಾಡಬೇಕು. ಇತ್ತೀಚಿಗೆ ನಮ್ಮ ಪಕ್ಷದ ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ರವರನ್ನು ಭೇಟಿಯಾಗಿ ಕೂಡ್ಲಿಗಿ ಕ್ಷೇತ್ರದ ಅಭಿವೃದ್ಧಿ ಸೇರಿದಂತೆ ಇನ್ನು ಆಗಬೇಕಾದ ಯೋಜನೆಗಳ ಬಗ್ಗೆ ಚರ್ಚಿಸಲಾಗಿತ್ತು. ಆದರೆ ಮಾಧ್ಯಮಗಳಲ್ಲಿ ಅದನ್ನು ತಿರುಚಿ ಬರೆದು ಜಿಲ್ಲಾ ಉಸ್ತುವಾರಿ ಸಚಿವರನ್ನು ಹಾಗೂ ಜಿಲ್ಲಾಧಿಕಾರಿಯನ್ನು ಬದಲಾವಣೆ ಮಾಡುವಂತೆ ಜಿಲ್ಲೆಯ ಶಾಸಕರ ಜತೆ ಸೇರಿ ಒತ್ತಾಯಿಸಿದ್ದಾರೆ ಎನ್ನುವಂತಹ ಸುಳ್ಳು ಸುದ್ದಿಗಳನ್ನು ತೋರಿಸಿದರು. ನಾನು ಎಲ್ಲಾ ಜಾತಿ, ಧರ್ಮ, ಜನಾಂಗದ ಪರವಾಗಿ ನಿರಂತರವಾಗಿ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದೇನೆ ಎಂದರು. ತಾಲೂಕಿನ ಪತ್ರಕರ್ತರು ಬದ್ಧತೆಯಿಂದ ಕೆಲಸ ಮಾಡುತ್ತಿದ್ದು, ಅವರು ಸಮಸ್ಯೆಗಳ ಕುರಿತು ಸುದ್ದಿಮಾಡಿ ಬೆಳಕು ಚೆಲ್ಲಿರುವುದನ್ನು ನೋಡಿ ನಾನು ಅನೇಕ ಸಮಸ್ಯೆಗಳನ್ನು ಬಗೆಹರಿಸಲು ಸಹಾಯವಾಗಿದೆ ಎಂದು ಸ್ಮರಿಸಿದರು. ಪತ್ರಕರ್ತರ ಬೇಡಿಕೆ ಪತ್ರಿಕಾ ಭವನಕ್ಕೆ ಕೇವಲ ಒಂದು ವಾರದಲ್ಲಿ ನೀಡುವ ಭರವಸೆ ಸೇರಿದಂತೆ ನಿವೇಶನ ರಹಿತ ಪತ್ರಕರ್ತರಿಗೆ ಸರ್ಕಾರದ ಮಟ್ಟದಲ್ಲಿ ಮಾತನಾಡಿ, ನಿವೇಶನ ನೀಡುವುದಾಗಿ ತಿಳಿಸಿದರು.

ಇದೇ ಸಂಧರ್ಭದಲ್ಲಿ ಪ್ರತಿಭಾವಂತ ವಿಧ್ಯಾರ್ಥಿಗಳಿಗೆ ಸನ್ಮಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಬಿಡಿಸಿಸಿ ಬ್ಯಾಂಕಿನ ಅಧ್ಯಕ್ಷ ಗುಂಡುಮುಣುಗು ಕೆ. ತಿಪ್ಪೇಸ್ವಾಮಿ, ಡಿವೈಎಸ್ಪಿ ಮಲ್ಲೇಶ್ ದೊಡ್ಡಮನಿ, ತಹಸೀಲ್ದಾರ್ ವಿ.ಕೆ. ನೇತ್ರಾವತಿ ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ, ಜ್ಞಾನಭಾರತಿ ವಿದ್ಯಾ ಸಂಸ್ಥೆಯ ಅಧ್ಯಕ್ಷ ಡಾ. ಕೆ.ಎಂ. ರವಿಕುಮಾರ್, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎಸ್.ವೆಂಕಟೇಶ್, ಎಪಿಎಂಸಿ ಅಧ್ಯಕ್ಷ ಕುರಿಹಟ್ಟಿ ಬೋಸಣ್ಣ, ದೀನಾ ಮಂಜುನಾಥ್, ಪಪಂ ಸ್ಥಾಯಿ ಸಮಿತಿ ಅಧ್ಯಕ್ಷ ಸೈಯದ್ ಶುಕೂರ್, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಪಿ.ಸತ್ಯನಾರಾಯಣ, ಕಾರ್ಯದರ್ಶಿ ಕೆ.ಲಕ್ಷ್ಮಣ, ರಾಜ್ಯ ಸಮಿತಿ ಸದಸ್ಯ ವೆಂಕೋಬ ನಾಯಕ, ಅಶ್ವಮೇಧ ಗ್ರೂಪ್ ನ ಮಾಲೀಕ ಟಿ.ಜಿ.ನಾಗರಾಜ ಗೌಡ, ಎರಿಸ್ವಾಮಿ ಬಣವಿಕಲ್ಲು, ಸಿ.ಕೆ.ನಾಗರಾಜ, ಅಜ್ಜನ ಗೌಡ ಸೇರಿದಂತೆ ಅನೇಕರು ಇದ್ದರು. ಹಾಗೂ ಕಾರ್ಯನಿರತ ಪತ್ರಕರ್ತ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಗರ್ಭಗುಡಿ..! ವಿಭಿನ್ನ ಕಥಾವಸ್ತುಗಳ ಸಂಗ್ರಹ

## ಕೈಗಾದಲ್ಲಿ ಜಿ. ಶಿವಕುಮಾರ್ ಅವರ 'ಗರ್ಭಗುಡಿ..!' ಕೃತಿ ಲೋಕಾರ್ಪಣೆ: ವಿಭಿನ್ನ ಕಥಾವಸ್ತುಗಳಿಗೆ ಮೆಚ್ಚುಗೆ





**ಹಂಪಿ ಟೈಮ್ಸ್ ಕೈಗಾ:**

ಉದಯೋನ್ಮುಖ ಲೇಖಕ ಜಿ. ಶಿವಕುಮಾರ್ ಅವರ ಎರಡನೇ ಕೃತಿ "ಗರ್ಭಗುಡಿ..!" ಯನ್ನು ಕೈಗಾ ವಸತಿ ಸಂಕೀರ್ಣದಲ್ಲಿ ಬುಧವಾರ ಲೋಕಾರ್ಪಣೆ ಮಾಡಲಾಯಿತು.

ಸಹ್ಯಾದ್ರಿ ಕನ್ನಡ ಸಂಘ ಕೈಗಾ ಆಯೋಜಿಸಿದ್ದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಕೈಗಾ ಪರಮಾಣು ವಿದ್ಯುತ್ ಉತ್ಪಾದನಾ ಘಟಕದ ಸ್ಥಳ ನಿರ್ದೇಶಕ ಬಿ. ವಿನೋದ್ ಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. ಬಿ. ವಿನೋದ್ ಕುಮಾರ್ ಅವರು ಮಾತನಾಡಿ, "ಗರ್ಭಗುಡಿ..!" ಒಂದು ಕಥಾ ಸಂಕಲನವಾಗಿದ್ದು, ವಿಭಿನ್ನ ಕಥಾವಸ್ತುಗಳ ಸಂಗ್ರಹವಾಗಿದೆ. ಇತಿಹಾಸ, ಸಾಂಸಾರಿಕ, ನಿತ್ಯ ನಡೆಯುವ ವಾಸ್ತವ ವಿಚಾರಗಳನ್ನು ಒಳಗೊಂಡ ಕಥೆಗಳು ಇಲ್ಲಿವೆ. ಹೀಗೆ ವಿವಿಧ ಸಂಬಂಧಗಳ ಕಥೆ ಹೇಳುವ ಲೇಖಕ ಶಿವಕುಮಾರ್ ಉತ್ತಮ ಭಾವನೆಗಳನ್ನು ಅಕ್ಷರ ರೂಪದಲ್ಲಿ ಹಿಡಿದಿಟ್ಟಿದ್ದಾರೆ" ಎಂದು ಪ್ರಶಂಸಿಸಿದರು.

ಪುಸ್ತಕ ಅವಲೋಕನ ಮಾಡಿದ ರಾಣೆಬೆನ್ನೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ. ವೆಂಕಟೇಶ್ ಅವರು ಮಾತನಾಡಿ, "ಸಾಹಿತ್ಯ ಮತ್ತು ಜನಪದ ಎರಡೂ ಒಂದಕ್ಕೊಂದು ಪೂರಕವಾದ ವಿಷಯಗಳು. ಜನಪದ ಹಿನ್ನೆಲೆಯುಳ್ಳ ಸಾಹಿತ್ಯ ಆಳವಾದ ಪ್ರಭಾವವನ್ನು ಬೀರಬಲ್ಲದು. 'ಗರ್ಭಗುಡಿ..!' ಅಂತಹ ಕಥಾವಸ್ತುವನ್ನು ಹೊಂದಿರುವ ಕೃತಿಯಾಗಿದೆ. ಕಥಾ ಸಂಕಲನದಲ್ಲಿರುವ ಕಥೆಗಳೆಲ್ಲ ಒಂದಕ್ಕಿಂತ ಒಂದು ಭಿನ್ನವಾಗಿವೆ, ಭಿನ್ನ ಭಿನ್ನ ವಿಷಯ ವಸ್ತುವಿನ ಮೇಲೆ ರಚಿತವಾಗಿದ್ದು, ಪ್ರತಿಯೊಂದು ಕಥೆಗಳು ಆಕರ್ಷಕವಾಗಿವೆ. ಆಯಾ ಕಾಲಘಟ್ಟದ ಅನುಭವ ಪ್ರೇರಿತ ಎನ್ನುವಂತೆ ಕಥೆ ಕಟ್ಟಲಾಗಿದೆ" ಎಂದು ವಿವರಿಸಿದರು.




ಲೇಖಕ ಜಿ. ಶಿವಕುಮಾರ್ ಮಾತನಾಡಿ, "ದೈನಂದಿನ ಚಟುವಟಿಕೆಗಳೇ ನನ್ನ ಕಥೆಗಳಿಗೆ ಪ್ರೇರಣೆ. ನನ್ನ ಬಾಲ್ಯ, ಶಾಲೆ, ಊರು, ಸ್ನೇಹಿತರು, ಬೆಟ್ಟ-ಗುಡ್ಡಗಳು, ನಮ್ಮೂರಿನ ದೇವಾಲಯಗಳೇ ನನ್ನ ಕಥೆಗಳಿಗೆ ಬೇಕಾದ ಸೂಕ್ಷ್ಮ ವಸ್ತು ವಿಷಯಗಳಿಗೆ ಆಕರಗಳಾಗಿವೆ. ಜೊತೆಗೆ, ವಿವಿಧ ಪತ್ರಿಕೆಗಳಿಗೆ ಬರವಣಿಗೆ, ಸುಮಾರು ಎರಡು ವರ್ಷಗಳ ಕಾಲ ನೆಚ್ಚಿನ 'ಹಂಪಿ ಟೈಮ್ಸ್' ಪತ್ರಿಕೆ ಹಾಗೂ ಸಂಪಾದಕ ಬಸಪುರ ಬಸವರಾಜರೊಂದಿಗಿನ ಒಡನಾಟ, ರಾಜ್ಯದ ವಿವಿಧೆಡೆ ಕೈಗೊಂಡ 'ಕಥಾಯಾನ ಕಾರ್ಯಾಗಾರ' ಹಾಗೂ 'ಸಹ್ಯಾದ್ರಿ ಕನ್ನಡ ಸಂಘದ ಸಾಹಿತ್ಯ ಸಂಗಮ, ಅಖಿಲ ಭಾರತೀಯ ಸಾಹಿತ್ಯ ಪರಿಷತ್‌ನ ಒಡನಾಟ' ನನ್ನ ಸಾಹಿತ್ಯ ರಚನೆಗೆ ಪೋಷಣೆಯಾಗಿವೆ" ಎಂದರು.

ಸಾಹಿತಿ ಮತ್ತು ಅಂಕಣಕಾರ ಸಂತೋಷ್ ಕುಮಾರ್ ಮೆಹಂದಳೆ ಅವರು ಪ್ರಾಸ್ತಾವಿಕ ನುಡಿಗಳೊಂದಿಗೆ ಸ್ವಾಗತಿಸಿ, ಲೇಖಕರೊಂದಿಗೆ ಸಂವಾದ ನಡೆಸಿಕೊಟ್ಟರು. ಎಸ್.ಆರ್.ಎನ್. ಮೂರ್ತಿ ನಿರೂಪಿಸಿದರೆ, ಸಹ್ಯಾದ್ರಿ ಕನ್ನಡ ಸಂಘದ ಅಧ್ಯಕ್ಷ ಜಿತೇಂದ್ರಕುಮಾರ್ ವಂದಿಸಿದರು. ಎಸ್.ಜೆ.ಟಿ. ಸ್ವಾಮಿ ಹಾಗೂ ಜಿತೇಂದ್ರಕುಮಾರ್ ಉಪಸ್ಥಿತರಿದ್ದರು. ಸಹ ಕಾರ್ಯದರ್ಶಿ ಎಂ.ಬಿ. ಸಜ್ಜನ್ ಮತ್ತು ಪ್ರಶಾಂತ್ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಸಂಘಟಿಸಿದರು.

ಗರ್ಭಗುಡಿ..! ಪುಸ್ತಕ ಬೆಲೆ 200/-, ಪ್ರಕಾಶಕರು: ಸಂಜೆ ಪಬ್ಲಿಕೇಷನ್ಸ್, ಬೆಂಗಳೂರು. ಪ್ರತಿಗಳಿಗೆ ಸಂಪರ್ಕಿಸಬಹುದು ಮೊ: 9008130204

# ಜು.12 ರಂದು ರಾಷ್ಟ್ರೀಯ ಲೋಕ್ ಅದಾಲತ್

**ಹಂಪಿ ಟೈಮ್ಸ್ ಬಳ್ಳಾರಿ**

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಇವರ ನಿರ್ದೇಶನದಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ವತಿಯಿಂದ ಜುಲೈ 12 ರಂದು ನಗರದ ತಾಳೂರು ರಸ್ತೆಯ ಹೊಸ ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿ ರಾಷ್ಟ್ರೀಯ ಲೋಕ್ ಅದಾಲತ್ ನಡೆಸಲಾಗುವುದು.

ಸಾರ್ವಜನಿಕರು ತಮ್ಮ ವ್ಯಾಜ್ಯಪೂರ್ವ, ರಾಜಿಯಾಗಬಹುದಾದ ಅಪರಾಧಿಕ ಪ್ರಕರಣಗಳು, ಚೆಕ್ ಪ್ರಕರಣಗಳು, ಬ್ಯಾಂಕ್ ಪ್ರಕರಣಗಳು, ಮೋಟಾರು ವಾಹನ ಅಪಘಾತ ಪರಿಹಾರ ನ್ಯಾಯಾಧೀಕರಣದ ಪ್ರಕರಣಗಳು, ವೈವಾಹಿಕ ಹಾಗೂ ಕೌಟುಂಬಿಕ ಪ್ರಕರಣಗಳು, ಸಿವಿಲ್ ಪ್ರಕರಣಗಳು ಹಾಗೂ ಇತರೆ ರಾಜಿಯಾಗಬಹುದಾದ ಪ್ರಕರಣಗಳನ್ನು ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಒಟ್ಟು 31 ನ್ಯಾಯಾಲಯಗಳಲ್ಲಿ ಜುಲೈ 12 ರಂದು ನಡೆಯುವ ರಾಷ್ಟ್ರೀಯ ಲೋಕ್ ಅದಾಲತ್ ಮೂಲಕ ಶೀಘ್ರವೇ ಇತ್ಯರ್ಥಗೊಳಿಸಿ ಪರಿಹಾರ ಪಡೆದುಕೊಳ್ಳಲು ಸುವರ್ಣ ಅವಕಾಶವಾಗಿದೆ. ಸಾರ್ವಜನಿಕರು ಹಾಗೂ ಕಕ್ಷಿದಾರರು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್.ಎನ್ ಹೊಸಮನೆ ಅವರು ತಿಳಿಸಿದ್ದಾರೆ.

## ಕವಿ ಮನಸು

### ಹೃದಯ ವೀಣೆ

ನುಡಿಸುತಿಹೆ ನನ್ನ ಮಾನಸ ವೀಣೆ
ಮೀಟುತ ಹೃದಯದ ತಂತಿಯ ತಾನೆ
ನಾದವ ಹೊರಡಿಸುವ ವೈಣಿಕ ನೀನೆ
ಕರಗುತ ಸ್ವರವಾಗಿ ಉಲಿದಿಹೆ ನಾನೆ

ಕೊರಡಾದ ಮರದ ತೆರದಿ ಮನಸು
ಬರಡಾದ ವನದ ತೆರದಿ ಕನಸು
ನಿನ್ನ ಸವಿಮಾತಿಗೆ ದೂರಾಗಿದೆ ಮುನಿಸು
ಹೃದಯದ ತಂತಿಯ ಮೀಟಲು ಸೊಗಸು

ಹೃದಯದ ವೀಣೆ ನುಡಿದಿದೆ ಸ್ವರವ
ಬಾಳಿನ ಗಾನಕೆ ಉಸಿರಿನ ಲಯವ
ಭಾವದ ತಂತಿಯ ಮೀಟುತ ನಡೆವ
ಗಾನದ ಸುಧೆಯಲಿ ಲಯವಾಗಲಿ ಜೀವ

– ಚೇತನ ಭಾರ್ಗವ, ಅರಮನೆತೋಟ

### ಜನಸಂಖ್ಯೆ

ಮೇರೆ ಮೀರಿ ಬೆಳೆಯುತ್ತಿದೆ,
ಇಂದು ಭಾರತದ ಜನಸಂಖ್ಯೆ.
ಮಿತಿ ಮೀರದೆ ಬೆಳೆಯಬೇಕು
ಇಲ್ಲಿ ಮಾನವರ ಸಂಖ್ಯೆ.

ಒಂದೆಡೆ ವಿಪರೀತ ಜನಸಂಖ್ಯೆ,
ಇನ್ನೊಂದಡೆ ಯುವಜನರಲ್ಲಿ,
ಕುಂಠಿತವಾಗುತ್ತಿದೆ ಸಂತಾನ ಶಕ್ತಿ.
ಇನ್ನು ಕೆಲವರಿಗೆ ಬೇಕಿಲ್ಲ,
ಮದುವೆ ಮಕ್ಕಳ ಜವಾಬ್ದಾರಿ.

ಇನ್ನೊಂದಷ್ಟು ಹೆತ್ತವರಿಗೆ ಅರಿವಿಲ್ಲ,
ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ,
ತಮ್ಮ ಮಕ್ಕಳೆ ತಳಪಾಯವೆಂದು.
ಮಕ್ಕಳೇ ದೇಶದ ಸಂಪತ್ತು ಎಂದು.

ಸುಭದ್ರ ದೇಶಕ್ಕೆ ಆರೋಗ್ಯವಂತ,
ಸುಸಂಸ್ಕೃತ ಪ್ರಜೆಗಳೇ ಆಧಾರ.
ಅದರೆ ಜನರ ಸಂಖ್ಯೆಯೇ ಹೆಚ್ಚಾಗಿ
ಆಗದಿರಲಿ ಭೂಮಿ ತಾಯಿಗೆ ಭಾರ.

– ಮಮತಾ ಶೃಂಗೇರಿ

# ವಿವಿಧ ಅಂಚೆ ವಿಮೆ ಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸಲು ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಚಿತ್ರದುರ್ಗ**

ಚಿತ್ರದುರ್ಗ ಅಂಚೆ ವಿಭಾಗದ ವ್ಯಾಪ್ತಿಯಲ್ಲಿ ಅಂಚೆ ಜೀವ ವಿಮೆ ಹಾಗೂ ಗ್ರಾಮೀಣ ಅಂಚೆ ಜೀವ ವಿಮೆಯ ಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸಲು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ತಮ್ಮ ಸಂಪೂರ್ಣ ವಿವರ ಹಾಗೂ ದಾಖಲೆಗಳೊಂದಿಗೆ ಚಿತ್ರದುರ್ಗ ನಗರದ ಫಿಲ್ಟರ್ ಹೌಸ್ ಹಿಂಭಾಗದ ವಿಭಾಗೀಯ ಅಂಚೆ ಕಚೇರಿಯ ಮೊದಲನೇಯ ಮಹಡಿಯಲ್ಲಿ ಇದೇ ಜುಲೈ 29ರಂದು ಬೆಳಿಗ್ಗೆ 11ಕ್ಕೆ ಜರುಗುವ ನೇರ ಸಂದರ್ಶನಕ್ಕೆ ಹಾಜರಾಗಬಹುದು. ಆಯ್ಕೆಯಾದ ಅಂಚೆ ಜೀವ ವಿಮಾ ಪ್ರತಿನಿಧಿಗಳು ರೂ.5000/- ರೂಪಾಯಿಗಳನ್ನು ಉಳಿತಾಯ ಪತ್ರ ರೂಪದಲ್ಲಿ ಜಮಾ ಮಾಡಲು ತಯಾರಿರಬೇಕು.

ಹೆಚ್ಚಿನ ಮಾಹಿತಿಗಾಗಿ ಅಂಚೆ ಜೀವ ವಿಮೆ ಅಭಿವೃದ್ಧಿ ಅಧಿಕಾರಿ ಪಿ.ಮೊಹಮ್ಮದ್ ಶಫಾಯತ್ ಉಲ್ಲಾ ಶರೀಫ್ ಅವರ ದೂರವಾಣಿ ಸಂಖ್ಯೆ 9449849279 ಸಂಪರ್ಕಿಸಬಹುದು ಎಂದು ಚಿತ್ರದುರ್ಗ ವಿಭಾಗ ಅಂಚೆ ಅಧೀಕ್ಷಕರಾದ ಕೆ.ಆರ್.ಉಷಾ ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
HAMPI TIMES VIJAYANAGARA
Only Admins can Send Messages to this Group
Join with Us

## ವೈದ್ಯಾಧಿಕಾರಿ ಡಾ.ದಿವ್ಯಶ್ರೀ ಹೇಳಿಕೆ

# ಜನಸಂಖ್ಯಾ ದುಷ್ಪಾರಿಣಾಮಗಳ ಜಾಗೃತಿ ಮೂಡಿಸಿ

**ಹಂಪಿ ಟೈಮ್ಸ್ ಹೊಸಪೇಟೆ**

ಆರೋಗ್ಯಕರ ಸಮಾಜಕ್ಕೆ ಎದುರಾಗುವ ಬೆದರಿಕೆಯನ್ನು ನಿಗ್ರಹಿಸಲು ಮತ್ತು ಮುಂಬರುವ ಪೀಳಿಗೆಗೆ ಉತ್ತಮ ಮತ್ತು ಸುಸ್ಥಿರ ಭವಿಷ್ಯವನ್ನು ಒದಗಿಸಲು, ಅಧಿಕ ಜನಸಂಖ್ಯೆಗೆ ಸಂಬಂಧಿಸಿದ ಅಪಾಯದ ಬಗ್ಗೆ ಯುವಜನತೆಗೆ ಜಾಗೃತಿ ಮೂಡಿಸುವುದು ಮತ್ತು ಜನರಿಗೆ ಶಿಕ್ಷಣ ನೀಡುವುದು ಅತ್ಯಗತ್ಯವಾಗಿದೆ ಎಂದು ಆಡಳಿತ ವೈದ್ಯಾಧಿಕಾರಿ ಡಾ.ದಿವ್ಯಶ್ರೀ ಹೇಳಿದರು.

ತಾಲೂಕಿನ ಗಾದಿಗನೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಏರ್ಪಡಿಸಿದ್ದ ವಿಶ್ವ ಜನಸಂಖ್ಯಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಶುಕ್ರವಾರ ಅವರು ಮಾತನಾಡಿದರು, ಯೋಜಿತ ಪೋಷಕತ್ವಕ್ಕಾಗಿ ಗರ್ಭಧಾರಣೆಯ ನಡುವಿನ ಆರೋಗ್ಯಕರ ಸಮಯ ಮತ್ತು ಅಂತರ ಎಂಬ ಧ್ಯೇಯದೊಂದಿಗೆ 2025ರ ವಿಶ್ವ ಜನಸಂಖ್ಯೆ ದಿನದ ಘೋಷವಾಕ್ಯವಾದ ತಾಯಿಯಾಗುವ ವಯಸ್ಸು : ದೇಹ ಮತ್ತು ಮನಸ್ಸಿನ ಸಿದ್ದತೆ" ಎಂದು ಈ ವರ್ಷದಲ್ಲಿ ಆಚರಿಸಲಾಗುತ್ತಿದೆ. ಜನಸಂಖ್ಯೆ ನಿಯಂತ್ರಣ ಪ್ರತಿಯೊಬ್ಬರ ಗುರಿಯಾಗಲಿ. ಜನಸಂಖ್ಯೆ ಹೆಚ್ಚಳದಿಂದ ಆಗುವ ಪರಿಣಾಮಗಳು ನಿಯಂತ್ರಣಕ್ಕಾಗಿ ಅನುಸರಿಸಬೇಕಾದ ಕ್ರಮಗಳ ಕುರಿತು ಜನಜಾಗೃತಿ ಮೂಡಿಸುವ ಅಗತ್ಯವಿದೆ ಎಂದರು.

ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ ಮಾತನಾಡಿ, ಜನಸಂಖ್ಯೆ ನಿಯಂತ್ರಣಕ್ಕೆ ಆರೋಗ್ಯ ಇಲಾಖೆಯಿಂದ ನೀಡುವ ಸೇವಾ ಸೌಲಭ್ಯಗಳು ಮತ್ತು ತಾತ್ಕಾಲಿಕ ಹಾಗೂ ಶಾಶ್ವತ ಮೌಲ್ಯಗಳ ಬಗ್ಗೆ ಪ್ರತಿ ಆಸ್ಪತ್ರೆಗಳಲ್ಲಿ ಮಾಹಿತಿ ನೀಡಲಾಗುತ್ತಿದೆ ಅನಗತ್ಯ ಗರ್ಭಧಾರಣೆಯನ್ನು ತಡೆಗಟ್ಟಲು ಯುವ ಸ್ನೇಹಿ ಕ್ರಮಗಳನ್ನು ಉತ್ತೇಜಿಸುವುದು. ಸಮಾಜದಲ್ಲಿರುವ ಲಿಂಗ ತಾರತಮ್ಯವನ್ನು ತಪ್ಪಿಸಲು ಜನರಿಗೆ ಶಿಕ್ಷಣ ನೀಡುವುದು. ಅತ್ಯಗತ್ಯ ಪ್ರಾಥಮಿಕ ಆರೋಗ್ಯ ಆರೈಕೆಯ ಭಾಗವಾಗಿ, ಪ್ರತಿ ದಂಪತಿಗಳು ಸಂತಾನೋತ್ಪತ್ತಿ ಆರೋಗ್ಯ ಸೇವೆಗಳಿಗೆ ಅಡೆತಡೆಯಿಲ್ಲದ ಪ್ರವೇಶವನ್ನು ಖಚಿತಪಡಿಸಿಕೊಳ್ಳುವುದು. ಗರ್ಭಧಾರಣೆಯ ಸಂಬಂಧಿತ ಕಾಯಿಲೆಗಳ ಬಗ್ಗೆ ದಂಪತಿಗಳಿಗೆ ಶಿಕ್ಷಣ ನೀಡುವುದು, ಆರಂಭಿಕ ಹೆರಿಗೆಯ ಅಪಾಯದ ಬಗ್ಗೆ ಅವರಿಗೆ ಅರಿವು ಮೂಡಿಸುವುದಾಗಿದೆ ಎಂದರು.

ಈ ವೇಳೆ ಕಾರ್ಯಕ್ರಮದಲ್ಲಿ ಡಾ.ಪೂಜಾ ಆರೋಗ್ಯ ಸುರಕ್ಷಣಾಧಿಕಾರಿ ಸಾವಿತ್ರಿ, ಚೌಮಿಯಾ, ಆರೋಗ್ಯ ನಿರೀಕ್ಷಣಾಧಿಕಾರಿ ಪಿ.ರಾಜೀವ್ ಸೇರಿದಂತೆ ಇಲಾಖೆ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.




# ಯೂರಿಯಾಗೊಬ್ಬರ ಅನಧಿಕೃತ ಶೇಖರಿಸಿಟ್ಟವರ ಮೇಲೆ ಕ್ರಮ - ಡಿಸಿ ಸುರೇಶ ಬಿ. ಇಟ್ನಾಳ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲೆಯಲ್ಲಿ ಈಗಾಗಲೇ ಯೂರಿಯಾ ಗೊಬ್ಬರ ಕಳೆದ ಭಾರಿಗಿಂತ ಹೆಚ್ಚು ಸರಬರಾಜು ಆಗಿದ್ದು ಇನ್ನೂ ಜಿಲ್ಲೆಯಲ್ಲಿ ಯಾರಾದರೂ ಅನಧಿಕೃತವಾಗಿ ಸ್ಟಾಕ್ ಇಟ್ಟಿದ್ದು ಕಂಡು ಬಂದರೆ ಅಂತಹವರ ವಿರುದ್ದ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ಅವರ ಅಂಗಡಿಗಳ ಲೈಸೆನ್ಸಗಳನ್ನು ರದ್ದು ಪಡಿಸಬೇಕೆಂದು ಜಿಲ್ಲಾಧಿಕಾರಿ ಸುರೇಶ ಬಿ. ಇಟ್ನಾಳ ಅವರು ಕೃಷಿ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅವರು ಶುಕ್ರವಾರ ಜಿಲ್ಲಾಧಿಕಾರಿಗಳ ಕಛೇರಿಯ ವಿಡಿಯೋ ಕಾನ್ಫರೇನ್ಸ್ ಹಾಲನಲ್ಲಿ ಕೊಪ್ಪಳ ಜಿಲ್ಲೆಯ ಬೆಳೆ ಸಮೀಕ್ಷೆ ಹಾಗೂ ಬೆಳೆವಿಮೆ ಪ್ರಗತಿ ಪರಿಶೀಲನೆ ಕುರಿತು ಕೃಷಿ ಹಾಗೂ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು, ಎಸ್.ಬಿ.ಐ ಲೀಡಬ್ಯಾಂಕ್ ಮ್ಯಾನೇಜರ್, ಜಿಲ್ಲೆಯ ಎಲ್ಲಾ ತಾಲ್ಲೂಕಿನ ತಹಶಿಲ್ದಾರರು, ಸಹಾಯಕ ಕೃಷಿ ಅಧಿಕಾರಿಗಳು, ರೈತ ಸಂಪರ್ಕ ಅಧಿಕಾರಿಗಳು, ಇನ್ಸೂರೆನ್ಸ್ ಕಂಪನಿಯ ಪ್ರತಿನಿಧಿಗಳು, ಗ್ರಾಮ ಒನ್ ಹಾಗೂ ಸಾಮಾನ್ಯ ಸೇವಾ ಕೇಂದ್ರಗಳ >>4

ಶ್ರೀ ಬಂಡೆರಂಗನಾಥ ಸೌಹಾರ್ದ ಪತ್ತಿನ ಸಹಕಾರಿ ಸಂಘ, ನಿ.
6-95/08, ರೈಲ್ವೆಗೇಟ್ ಎಸ್.ಬಿ.ಐ.ಹಿಂಭಾಗ, ವಿನಾಯಕ ಖಾನಾವಳಿ ಹಿಂದೆ. 16ನೇ ವಾರ್ಡ್ ಕೆ.ವಿ.ಓ.ಆರ್ ಕಾಲೋನಿ. ಹಗರಿಬೊಮ್ಮನಹಳ್ಳಿ ತಾಲೂಕು-583212, ವಿಜಯನಗರ ಜಿಲ್ಲೆ. ಪೋ:9036815789
ಪತ್ರಿಕಾ ಪ್ರಕಟಣೆ
2024-25ನೇ ಸಾಲಿನ ಸಾಮಾನ್ಯ ಸಭೆ ಸೂಚನಾ ಪತ್ರ
ನಮ್ಮ ಸಹಕಾರಿಯ ಸನ್ 2024-25ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು, ದಿನಾಂಕ.06-08-2025ರ ಬುಧವಾರ ಬೆಳಗ್ಗೆ : 10.30ಗಂಟೆಗೆ ನಮ್ಮ ಸಹಕಾರಿ ಕಚೇರಿ ಮುಂಭಾಗದಲ್ಲಿ, ಅಧ್ಯಕ್ಷರಾದ **ಶ್ರೀ ಪತ್ರೇಶ್ ಹಿರೇಮಠ್** ಇವರ ಘನ ಅಧ್ಯಕ್ಷತೆಯಲ್ಲಿ, ಸಹಕಾರಿ ಪತ್ತಿನ ಸಂಘದ ವಿಷಯಗಳನ್ನು ಚರ್ಚಿಸಲು ಸಭೆಯನ್ನು ಕರೆಯಲಾಗಿದೆ. ಸನ್ಮಾನ್ಯ ಸದಸ್ಯರು ಸಕಾಲದಲ್ಲಿ ಹಾಜರಿದ್ದು ಕಾರ್ಯಕಲಾಪದಲ್ಲಿ ಭಾಗವಹಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.
ದಿನಾಂಕ: 09-07-2025
ಸ್ಥಳ: ಹಗರಿಬೊಮ್ಮನಹಳ್ಳಿ.
ಸಹಿ/
ಕಾರ್ಯಕಾರಿ ಮಂಡಳಿ ಪರವಾಗಿ
(ಎಚ್.ಎಂ. ಶ್ರೀ ಯರ್ರಿಸ್ವಾಮಿ)
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
ವಿ.ಸೂ:
01- ಈ ಸಭೆಗೆ ಬರುವಾಗ ಈ ಪತ್ರ ತಪ್ಪದೇ ತರಬೇಕು.
02-ಸಾಮಾನ್ಯ ಸಭೆಯಲ್ಲಿ ಸಹಕಾರಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಚರ್ಚಿಸಲು ಸದಸ್ಯರು ಬಯಸಿದಲ್ಲಿ 7ದಿನಗಳ ಮುಂಚಿತವಾಗಿ ಲಿಖಿತ ರೂಪದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸಲ್ಲಿಸಬೇಕು.

ಶ್ರೀಸದ್ಗುರು ಮಹಾದೇವತಾತ ವಿವಿದೋದ್ದೇಶ ಸೌಹಾರ್ದ ಸಹಕಾರಿ, (ನಿ.)
ಮಲ್ಲಿಕಾರ್ಜುನ ಕಾಂಪ್ಲೆಕ್ಸ್, ನೇತಾಜಿ ರಸ್ತೆ. ರಾಮನಗರ- ಹಗರಿಬೊಮ್ಮನಹಳ್ಳಿ.-583212. ವಿಜಯನಗರ ಜಿಲ್ಲೆ, ಪೋ:7338007770
ಪತ್ರಿಕಾ ಪ್ರಕಟಣೆ
2024-25ನೇ ಸಾಲಿನ ಸಾಮಾನ್ಯ ಸಭೆಯ ಸೂಚನಾ ಪತ್ರ
ನಮ್ಮ ಸಹಕಾರಿಯ ಸನ್ 2024-25ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ: 06-08-2025ರ ಬುಧವಾರ ಬೆಳಗ್ಗೆ : 10.30 ಗಂಟೆಗೆ, ನಮ್ಮ ಸಹಕಾರಿ ಕಚೇರಿ ಮುಂಭಾಗದಲ್ಲಿ ಅಧ್ಯಕ್ಷರಾದ **ಶ್ರೀಮತಿ ಮಮತ ಸುರೇಶ ಚಿನಮಳ್ಳಿ** ಇವರ ಘನ ಅಧ್ಯಕ್ಷತೆಯಲ್ಲಿ, ಸಹಕಾರಿ ಪತ್ತಿನ ಸಂಘದ ವಿಷಯಗಳನ್ನು ಚರ್ಚಿಸಲು ಸಭೆಯನ್ನು ಕರೆಯಲಾಗಿದೆ. ಸನ್ಮಾನ್ಯ ಸದಸ್ಯರು ಸಕಾಲದಲ್ಲಿ ಹಾಜರಿದ್ದು ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.
ದಿನಾಂಕ: 09-07-2025
ಸ್ಥಳ: ಹಗರಿಬೊಮ್ಮನಹಳ್ಳಿ.
ಸಹಿ/
ಕಾರ್ಯಕಾರಿ ಮಂಡಳಿ ಪರವಾಗಿ
(ಎಚ್.ಎಂ.ಪಲ್ಲವಿ)
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
ವಿ.ಸೂ:
01- ಈ ಸಭೆಗೆ ಬರುವಾಗ ಈ ಪತ್ರ ತಪ್ಪದೇ ತರಬೇಕು.
02- ಸಾಮಾನ್ಯ ಸಭೆಯಲ್ಲಿ ಸಹಕಾರಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಚರ್ಚಿಸಲು ಸದಸ್ಯರು ಬಯಸಿದಲ್ಲಿ, 7ದಿನಗಳ ಮುಂಚಿತವಾಗಿ ಲಿಖಿತ ರೂಪದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸಲ್ಲಿಸಬೇಕು.

ಕರ್ನಾಟಕ ಸರ್ಕಾರ
ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಕೂಡ್ಲಿಗಿ, ವಿಜಯನಗರ ಜಿಲ್ಲೆ.
ಸಂಖ್ಯೆ/ಸಾ.ಆ.ಕೂ/ಟೆಂಡರು/ಪಥ್ಯಾಹಾರ/02/2025-26 ದಿ:10.07.2025
ಇ-ಟೆಂಡರ್ ಪ್ರಕಟಣೆ
2025-26 ನೇ ಸಾಲಿಗಾಗಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಕೂಡ್ಲಿಗಿ ಇಲ್ಲಿಗೆ ಪಥ್ಯಾಹಾರಕ್ಕಾಗಿ ಬೇಕಾಗುವ ಸಿದ್ದಪಡಿಸಿದ ಆಹಾರ ಪದಾರ್ಥಗಳು, ಕೋಳಿ ಮೊಟ್ಟೆ, ಬಾಳೆಹಣ್ಣು ಮತ್ತು ಉತ್ತಮ ದರ್ಜೆಯ ಬ್ರೆಡ್ ಸರಬರಾಜಿಗಾಗಿ ಇ-ಪ್ರೋಕ್ಯೂರ್ಮೆಂಟ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಹಾಗೂ ಅರ್ಹವುಳ್ಳ ಟೆಂಡರುದಾರರು ನಿಗದಿತ ಸಮಯದೊಳಗೆ ಇ-ಪ್ರೋಕ್ಯೂರ್ಮೆಂಟ್ ವೇದಿಕೆ ಮೂಲಕ ಟೆಂಡರುಗಳನ್ನು ಸಲ್ಲಿಸಲು ಕೋರಿದೆ.
Diet -Tender No. **GHK/TENDER/DIET/02/2025-26.** Supply of Diet and Bread e-Tender No. **DHFWS/2025-26/IND1698.** Commencement of downloading of e-tender forms from website **http://eproc.karnataka.gov.in. ದಿನಾಂಕ:10.07.2025 ರಿಂದ 21.07.2025 ರಂದು ಸಂಜೆ 4.00 ಗಂಟೆಯವರೆಗೆ.** Last date for uploading of Tender in e-procurement platform: **ದಿನಾಂಕ: 23.07.2025 ರಂದು ಸಂಜೆ 4.00 ಗಂಟೆಯವರೆಗೆ.** Date, Time & Venue of Opening of Tenders ದಿನಾಂಕ: **28.07.2025 ರಂದು ಬೆಳಿಗ್ಗೆ 11.30 ಗಂಟೆಗೆ, ಆಡಳಿತ ವೈದ್ಯಾಧಿಕಾರಿಗಳು, ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಕೂಡ್ಲಿಗಿ-583135, ವಿಜಯನಗರ ಜಿಲ್ಲೆ ಇವರ ಕಛೇರಿಯಲ್ಲಿ ಇ-ಪ್ರೋಕ್ಯೂರ್ಮೆಂಟ್ ವೇದಿಕೆ ಮೂಲಕ ತೆರೆಯಲಾಗುವುದು.** EMD for supply of DIET: **Rs.63750/-.** EMD for supply of Bread: **Rs.4950/-. Total: Rs.68700/-.**
ಇ-ಪ್ರೋಕ್ಯೂರ್ಮೆಂಟ್‌ನಲ್ಲಿ ನೋಂದಾಯಿಸಿದ ಟೆಂಡರ್‌ದಾರರು ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಇ.ಎಂ.ಡಿ, ಟೆಂಡರು ಫಾರಂ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೋಕ್ಯೂರ್ಮೆಂಟ್ ಪೋರ್ಟಲ್ ವೆಬ್‌ಸೈಟ್ **http://eproc.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಕಛೇರಿಯ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸಲು ಕೋರಲಾಗಿದೆ.
ಸಹಿ/-ಆಡಳಿತ ವೈದ್ಯಾಧಿಕಾರಿಗಳು
ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಕೂಡ್ಲಿಗಿ-583135, ವಿಜಯನಗರ ಜಿಲ್ಲೆ
ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್ಎಂಸಿಎ/ಆರ್.ಓ.ಸಂಖ್ಯೆ/144

ಜ್ಞಾನವೇ ಶಕ್ತಿ
ಮನಸ್ಸು ಮಾಡು | ಕರ್ತವ್ಯ ನಿಷ್ಠನಾಗು ಕಾದು ನೋಡು
ಶಿಕ್ಷಣವು ಕರಗದ ಸಂಪತ್ತು
ಮಕ್ಕಳ ಕೈಗೆ ದಿನಪತ್ರಿಕೆ ನೀಡಿ
ಹಂಪಿ ಟೈಮ್ಸ್ ಮಾರ್ಗದರ್ಶಿ ಪ್ರತಿದಿನ ಓದಿ, ನಿಮ್ಮ ಜ್ಞಾನ ಸಂಪತ್ತನ್ನು ಇಮ್ಮಡಿಗೊಳಿಸಿ,
ಈ ಬಾರಿ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಗರಿಷ್ಠ ಫಲಿತಾಂಶ ನಿಮ್ಮದಾಗಲಿ...
ವಿದ್ಯಾರ್ಥಿಗಳೇ ಶಾಲೆಗೊಂದು 625 ಗುರಿ ನಿಮ್ಮದಾಗಲಿ, ಹಂಪಿ ಟೈಮ್ಸ್ ಮಾರ್ಗದರ್ಶಿ ನಿತ್ಯ ಓದಿ ಬರೆದಿಟ್ಟುಕೊಳ್ಳಿ
ನಿಮಗಾಗಿ ದಿನವೂ ಪ್ರಶ್ನೋತ್ತರ | ಪ್ರತಿ ಭಾನುವಾರ ಪಠ್ಯಾಧಾರಿತ ಪದಸ್ಫೂರ್ತಿ ಮತ್ತು ಕನ್ನಡ ವ್ಯಾಕರಣ
ಹಂಪಿ ಟೈಮ್ಸ್ ಇ-ಪೇಪರ್


94486 33038 www.hampitimes.com / epaper.hampitimes.com Vijayanagara hampitimes@gmail.com

## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ವಿಶ್ವಾವಸು

**12–07–2025 – ಶನಿವಾರ**

| | |
|---|---|
| ತಿಥಿ | : ದ್ವಿತೀಯ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಉತ್ತರಾಷಾಡ |
| ಯೋಗ | : ವಿಷ್ಕುಂಭ |
| ಕರಣ | : ತೈತುಲ |
| ಸೂರ್ಯೋದಯ | : 05:50:12 |
| ಸೂರ್ಯಾಸ್ತ | : 19:14:54 |
| ರಾಹು ಕಾಲ | : 09:11–10:52 |
| ಯಮಘಂಡ ಕಾಲ | : 14:13–15:54 |
| ಗುಳಿಕ ಕಾಲ | : 05:50–07:31 |

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 11–07–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1624.86 ಅಡಿ |
| ಒಳ ಹರಿವು | 41972 ಕ್ಯುಸೆಕ್ |
| ಹೊರ ಹರಿವು | 40657 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 76.031 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1604.12 ಅಡಿ |
| ಒಳ ಹರಿವು | 25349 ಕ್ಯುಸೆಕ್ |
| ಹೊರ ಹರಿವು | 205 ಕ್ಯುಸೆಕ್ |
| ಸಾಮರ್ಥ್ಯ | 27.330 ಟಿಎಂಸಿ |

## ಮೈಕ್ರೋ ನ್ಯೂಸ್

### ವಕ್ಫ್ ಕಾಯ್ದೆ ವಿರುದ್ಧ ಮುಸ್ಲಿಂದ ಸಮುದಾಯ ಆಕ್ರೋಶ

**ಹಂಪಿ ಟೈಮ್ಸ್ ಹೊಸಪೇಟೆ**
ನಗರದ ಎಲ್ಲಾ ಮಸೀದಿಗಳ ಮುಂಭಾಗದಲ್ಲಿ ಅಖಂಡ ಭಾರತ ಮುಸ್ಲಿಂ ವೈಯುಕ್ತಿಕ ನ್ಯಾಯ ಮಂಡಳಿ ವತಿಯಿಂದ ನಗರದ ಚಿತ್ತವಾಡ್ಗಿಯ ಜಾಮೀಯ ಮಸೀದಿ ಅಡಳಿತ ಮಂಡಳಿ ನೇತೃತ್ವದಲ್ಲಿ ಕೇಂದ್ರ ಸರ್ಕಾರ ಜಾರಿ ಮಾಡಿದ 2025 ವಕ್ಫ್ ಕಾಯಿದೆ ವಿರುದ್ಧ ಸಾಂಕೇತಿಕವಾಗಿ ಮಾನವ ಸರಪಳಿ ನಡೆಸಲಾಯಿತು

ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಹಾಗು ಹೊಸಪೇಟೆಯ ಅಂಜುಮನ್ ಸಂಸ್ಥೆಯ ಅಧ್ಯಕ್ಷರಾದ ಹೆಚ್. ಎನ್ ಮೊಹಮ್ಮದ್ ಇಮಾಮ ನಿಯಾಜ್ ರವರು ಮಾತನಾಡಿ ವಖ್ಫ್ ಕಾಯಿದೆ 2025 ರ ಕಾಯಿದೆ ಹಿಂಪಡೆಯುವವರೆಗೂ ಕೇವಲ ವಿಜಯನಗರ ಜಿಲ್ಲೆಯಲ್ಲಿ ಮಾತ್ರವಲ್ಲದೆ ಇಡೀ ದೇಶದಾದ್ಯಂತ ಹಾಗೂ ಎಲ್ಲಾ ರಾಜ್ಯಗಳಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಎಲ್ಲಾ ತಾಲೂಕುಗಳಲ್ಲಿ ನಿರಂತರವಾಗಿ ಹೋರಾಟಗಳನ್ನು ಮಾಡು ತ್ತೇವೆ. ಹಾಗೂ ಆನಂತರವು ಕಾಯ್ದೆ ಯನ್ನು ಹಿಂಪಡೆಯದೇ ಹೋದರೆ ಮುಂದಿನ ದಿನಗಳಲ್ಲಿ ದೇಶದಾದ್ಯಂತ ಉಗ್ರ ಹೋರಾಟ ಮಾಡುವುದಾಗಿ ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು..

ಪ್ರತಿಭಟನೆಯಲ್ಲಿ ಅಂಜುಮನ್ ಕಮಿಟಿಯ ಗುಲಾಮ ರಸುಲ್, 12ನೇ ವಾರ್ಡಿನ ನಗರಸಭಾ ಸದಸ್ಯರಾದ ಅಸ್ಲಾಂ ಮಳಗಿ, ಹಾಗೂ ಮುಸ್ಲಿಂ ಸಮಾಜದ ಮುಖಂಡರಾದ ನಾಸಿರ್, ಸಿ ಇಂತಿಯಾಜ್, ಆಜಾಮ್, ಚಂದ್ ಭಾಷಾ, ಕೆ ನಜೀರ್, ತಪ್ಪಡ್ ಸಾಹೇಬ್, ಲಿಯಾಕತ್, ಖಾಜಾ ಹುಸೇನ್ ನಿಯಾಜಿ, ಹಾಗೂ ನೂರಾರು ಮುಸ್ಲಿಂ ಮುಖಂಡರು ಭಾಗವಹಿಸಿದ್ದರು.

# ಗ್ರಾ.ಪಂ ಸದಸ್ಯ ಸಂಭಾವನೆಯ ಹಣದಿಂದ ಸರ್ಕಾರಿ ಶಾಲಾ ಮಕ್ಕಳಿಗೆ ಪುಸ್ತಕ ವಿತರಣೆ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**
ತಾಲೂಕಿನ ಹಂಪಾಪಟ್ಟಣ ಗ್ರಾಮ ಪಂಚಾಯಿತಿಯ ಸದಸ್ಯ ಟಿ.ಮಂಜುನಾಥ್ ತನ್ನ ಪಂಚಾಯಿತಿಯ ಸದಸ್ಯರ ಸಂಭಾವನೆಯ ಹಣದಿಂದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಏಳನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತ ನೋಟ್ಸ್ ಪುಸ್ತಕ ವಿತರಣೆ ಮಾಡಿದ್ದಾರೆ.

ಕಾರ್ಯಕ್ರಮದಲ್ಲಿ ಗಾ.ಪಂ ಸದಸ್ಯ ಟಿ. ಮಂಜುನಾಥ ಮಾತನಾಡಿ, ಜನಸೇವೆಯೇ ಜನಾರ್ದನ ಸೇವೆ ಎನ್ನುವುದು ನನ್ನ ಭಾವನೆ, ಇರುವ ಸಮಯದಲ್ಲಿ ಜನೋಪಯೋಗಿ ಕೆಲಸ ಮಾಡುತ್ತಾ, ಮುಖ್ಯವಾಗಿ ಭವಿಷ್ಯದ ರೂವಾರಿಗಳಾಗಿರುವ ವಿದ್ಯಾರ್ಥಿಗಳಿಗೆ ಶಿಕ್ಷಣದ ಬಗ್ಗೆ ಮಹತ್ವವನ್ನು ಸಾರಿ ಪ್ರತಿ ವರ್ಷವೂ ಏಳನೇ ತರಗತಿಯ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ ಕಾರ್ಯಕ್ರಮವನ್ನು ಮಾಡುತ್ತಿದ್ದೇನೆ. ಇದು ನನ್ನ ಅಳಿಲು ಸೇವೆ ಎಂದರು.

ಕನ್ನಡ ಜಾಗೃತ ವೇದಿಕೆ ರಾಜ್ಯ ಉಪಾಧ್ಯಕ್ಷರಾದ ಬುಡ್ಡಿ ಬಸವರಾಜ್ ಮಾತನಾಡಿ, ಇಂದಿನ ದಿನಮಾನದಲ್ಲಿ ಕನ್ನಡ ಶಾಲೆಗಳ ಪರಿಸ್ಥಿತಿ ಹೇಳತೀರದ್ದು, ಇಂತಹ ಸಂದಿಗ್ಧ ಸಮಯದಲ್ಲಿ ತನ್ನ ಗ್ರಾಮ ಪಂಚಾಯಿತಿಯ ಸಂಭಾವನೆಯಲ್ಲಿ ಗ್ರಾಮದ ಸರ್ಕಾರಿ ಶಾಲೆಯ ಏಳನೇ ತರಗತಿಯ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ ಮಾಡಿದ, ಕ್ರಿಯಾಶೀಲ ಗ್ರಾಮ ಪಂಚಾಯಿತಿಯ ಸದಸ್ಯರಾದ ಟಿ.ಮಂಜುನಾಥರ ಕಾರ್ಯ ಸರ್ವರಿಗೂ ಪ್ರೇರಣಾದಾಯಕವಾದದ್ದು, ಎಲ್ಲಾ ನಾಗರಿಕ ಬಂಧುಗಳು ತಮ್ಮ ತಮ್ಮ ಗ್ರಾಮಗಳಲ್ಲಿರುವ ಸರ್ಕಾರಿ ಶಾಲೆಯನ್ನು ಉಳಿಸುವಲ್ಲಿ ಬೆಳೆಸುವಲ್ಲಿ ಕಂಕಣ ಬದ್ಧರಾಗಿ ಸರ್ಕಾರಿ ಶಾಲೆಗಳಿಗೆ ಕೊಡುಗೆಳನ್ನು ನೀಡುವ ಮೂಲಕ ಸರ್ಕಾರಿ ಶಾಲೆಗಳನ್ನು ಉಳಿಸುವಲ್ಲಿ ನಾಗರಿಕರ ಪಾತ್ರ ಮಹತ್ತರವಾದದ್ದು, ಇಂತಹ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳಲ್ಲಿ ಶಿಕ್ಷಣದ ಬಗ್ಗೆ ಮಹತ್ವ ಮೂಡಿಸುವುದು ಶ್ಲಾಘನೀಯ ಎಂದರು.

ಈ ಸಂದರ್ಭದಲ್ಲಿ ಹಂಪಾಪಟ್ಟಣ ಗ್ರಾ.ಪಂ ಅಧ್ಯಕ್ಷೆ ಹುಲಿಗೆಮ್ಮ ಕಾಳಪ್ಪ, ಗ್ರಾ.ಪಂ ಸದಸ್ಯರಾದ ಬಲ್ಲಾಹುಣ್ಸಿ ನಾಗರಾಜ್, ಎಸ್ ಗಾಳೆಪ್ಪ, ಎನ್.ನಾಗರಾಜ, ವಿಎಸ್ಎಸ್ಎನ್ ಸದಸ್ಯ ಕೆ.ಹುಲುಗಪ್ಪ. ಕನ್ನಡ ಜಾನಪದ ಪರಿಷತ್ ತಾಲೂಕಾಧ್ಯಕ್ಷ ಎ.ಕೇಶವಮೂರ್ತಿ, ಉಪ್ಪಾರ್ ಕನಕಪ್ಪ, ತೀರ್ಥ ಪ್ರಸಾದ, ಸುರೇಶ್ ಕಲಾಲ್, ಪ್ರಭಾರಿ ಮುಖ್ಯ ಶಿಕ್ಷಕ ಉಮೇಶ್ ಸೇರಿ ಶಾಲಾ ಸಿಬ್ಬಂದಿವರ್ಗ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನಪತ್ರಿಕೆ


SSLC ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಹೈಸ್ಕೋರ್ ಗಳಿಸಲು
ತಜ್ಞ ಶಿಕ್ಷಕರಿಂದ ಪ್ರಶ್ನೋತ್ತರ ಸರಣಿ
ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ
scan to read epaper
1 ಜುಲೈ 2025 ರಿಂದ ಪ್ರತಿದಿನ
ನಿಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಇನ್ಸ್ಟಾಲ್ ಮಾಡಿಕೊಳ್ಳಿ!

## ಯುವ ಸೌರಭ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮೇಯರ್ ಮುಲ್ಲಂಗಿ ನಂದೀಶ್ ಕರೆ

# ವಿದ್ಯಾರ್ಥಿಗಳು ಕಲಾಸಕ್ತಿ ಬೆಳೆಸಿಕೊಳ್ಳಿ




**ಹಂಪಿ ಟೈಮ್ಸ್ ಬಳ್ಳಾರಿ**
ಓದಿನ ಜೊತೆಯಲ್ಲಿ ವಿದ್ಯಾರ್ಥಿಗಳು ಕಲಾಸಕ್ತಿ ಬೆಳೆಸಿಕೊಳ್ಳಬೇಕು ಎಂದು ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್ ಅವರು ಕರೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಇವರ ಸಂಯುಕ್ತಾಶ್ರಯದಲ್ಲಿ ವಿಶ್ರೀಕೃ ವಿವಿಯ ಡಾ.ಬಿ. ಆರ್.ಅಂಬೇಡ್ಕರ್ ಸಭಾಂಗಣದಲ್ಲಿ ಶುಕ್ರವಾರ ಏರ್ಪಡಿಸಿದ್ದ "ಯುವ ಸೌರಭ" ಸಾಂಸ್ಕೃತಿಕ ಕಾರ್ಯಕ್ರಮವನ್ನು ನಗಾರಿ ಬಾರಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು. ಕಲೆಯನ್ನು ಆಸ್ವಾದಿಸುವ ಮನಸ್ಥಿತಿ ಬಹಳ ಮುಖ್ಯ. ವಿದ್ಯಾರ್ಥಿಗಳು ಕೇವಲ ವಿದ್ಯಾಭ್ಯಾಸಕ್ಕೆ ಸೀಮಿತ ವಾಗಿರಬಾರದು. ತಮ್ಮಲ್ಲಿನ ಕಲಾ ಪ್ರತಿಭೆ ಗಳನ್ನು ಹೊರಹಾಕಬೇಕು. ಸಾಂಸ್ಕೃತಿಕವಾಗಿ ದೇಶಕ್ಕೆ ಕೊಡುಗೆ ನೀಡಬೇಕು ಎಂದು ಹೇಳಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಅವರು ಮಾತನಾಡಿ, ಶಿಕ್ಷಣ ಎಂದರೆ ಕೇವಲ ವಿದ್ಯಾಭಾಸ ವಲ್ಲ, ಬದಲಾಗಿ ವಿದ್ಯಾರ್ಥಿಗಳು ಕಲೆ, ಕವನ, ಕವಿತೆ, ಸಾಹಿತ್ಯ ಬರವಣಿಗೆ, ವಿದ್ಯೆ–ವಿನಯ ಅಳವಡಿಸಿಕೊಂಡರೆ ದೇಶದ ಸಂಸ್ಕೃತಿ ಸಮೃದ್ಧಿಗೆ ಬೆಳಕಾಗುತ್ತದೆ ಎಂದರು.

ಯುವಕರು ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ಯುವಕರಲ್ಲಿನ ಕಲೆಯನ್ನು ಪ್ರೋತ್ಸಾಹಿಸುವುದಕ್ಕಾಗಿಯೇ 'ಯುವ ಸೌರಭ' ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದ್ದು, ವೇದಿಕೆ ಸದ್ಬಳಕೆ ಮಾಡಿಕೊಳ್ಳಬೇಕು. ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ 'ಯುವನಿಧಿ' ಯೋಜನೆಯ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವ ಕುರಿತು ವಿವಿಯ ಕುಲಪತಿಯವರೊಂದಿಗೆ ಚರ್ಚಿಸಲಾಗಿದೆ ಎಂದರು.

ವಿವಿಯ ಕುಲಪತಿ ಪ್ರೊ.ಎಂ.ಮುನಿರಾಜು ಅವರು ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಒತ್ತಡ ಜೀವನದಲ್ಲಿ ಕಲೆಯು ನೆಮ್ಮದಿಯ ಪಾಠ ಕಲಿಸುತ್ತದೆ. ಕಲಾಭ್ಯಾಸಕ್ಕೆ ಬಳ್ಳಾರಿಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿವಿಯಲ್ಲಿ ನಾಟಕ ವಿಭಾಗ ವಿದ್ದು, ವಿದ್ಯಾರ್ಥಿಗಳಿಗೆ ಕಲಾ ಶಿಕ್ಷಣ ಬೋಧನೆ ಮಾಡುವ ಕೆಲಸವಾಗುತ್ತಿದೆ ಎಂದರು.

ವಿವಿಯಲ್ಲಿ ಸುಸಜ್ಜಿತ ಆಡಿಟೋರಿಯಂ ಹಾಲ್ ನಿರ್ಮಾಣ ಕುರಿತಂತೆ ಜಿಲ್ಲಾ ಉಸ್ತುವಾರಿ ಸಚಿವ ರೊಂದಿಗೆ ಚರ್ಚಿಸಲಾಗುವುದು. ಗುಣ ಮಟ್ಟದ ಕಟ್ಟಡ ನಿರ್ಮಾಣಕ್ಕಾಗಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.

ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು:
ಬಳಿಕ ಕಾರ್ಯಕ್ರಮದಲ್ಲಿ ಕಂಪ್ಲಿ ಎಮ್ಮಿಗನೂರಿನ ಜ್ಞಾನೇಶ್ವರ ತಂಡದಿಂದ ಸುಗಮ ಸಂಗೀತ, ಬಳ್ಳಾರಿಯ ನಟರಾಜ ಕುಚುಪುಡಿ ನೃತ್ಯ–ಸಂಗೀತ ಮತ್ತು ಚಾರಿಟಬಲ್ ಟ್ರಸ್ಟ್ ವತಿಯಿಂದ ಸಮೂಹ ನೃತ್ಯ, ಸಂಡೂರು ತಾಲ್ಲೂಕಿನ ವಿ.ನಾಗಲಾಪುರದ ಶರಣಬಸವ.ಹೆಚ್ ಅವರ ಜಾನಪದ ಗೀತೆ, ಸಿರಿಗೇರಿಯ ಎನ್.ಮಣಿಕಂಠ ಸಂಗಡಿಗರಿಂದ ಬಯಲಾಟ (ಭಾರ್ಗವ ರಾಮ), ಬಳ್ಳಾರಿಯ ಎಂ.ಎಸ್.ಹರ್ಷ ತಂಡದಿಂದ ತಾಷರಂಡೋಲ್, ಸಂಡೂರು ತಾಲ್ಲೂಕಿನ ಎಂ.ಬಸಾಪುರದ ಆರ್.ನಾಗರಾಜ ತಂಡದಿಂದ ಡೊಳ್ಳು ಕುಣಿತ ಸೇರಿದಂತೆ ಇತರೆ ವೈವಿಧಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಭಾಗವಹಿಸಿದ ಎಲ್ಲಾ ತಂಡಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಕುಲಸಚಿವ(ಮೌಲ್ಯಮಾಪನ) ಪ್ರೊ.ಎನ್.ಎಂ.ಸಾಲಿ, ಕರ್ನಾಟಕ ಬಂಜಾರ ಸಂಸ್ಕೃತಿ ಅಕಾಡೆಮಿಯ ಸದಸ್ಯ ಪ್ರೊ.ಶಾಂತನಾಯ್ಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ವಿವಿಯ ವಿವಿಧ ವಿಭಾಗಗಳ ಬೋಧಕ–ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಮುತ್ಸದ್ಧಿ ರಾಜಕಾರಣಿ ತಿಪ್ಪಣ್ಣ ಇನ್ನಿಲ್ಲ

## ಶ್ರೀಗಳಿಂದ ಸಂತಾಪ ಸೂಚನೆ



**ಹಂಪಿ ಟೈಮ್ಸ್ ಹೊಸಪೇಟೆ**
ಶ್ರೀಜಗದ್ಗುರು ಕೊಟ್ಟೂರುಸ್ವಾಮಿ ಮಠದ ಅಭಿಮಾನಿಗಳು, ಹಿರಿಯ ರಾಜಕಾರಣಿ ಮುತ್ಸದ್ಧಿ ಹಾಗೂ ಅಖಿಲ ಭಾರತ ವೀರಶೈವ ಮಹಾಸಭೆಯ ರಾಜ್ಯಾಧ್ಯಕ್ಷರಾಗಿದ್ದ ಎನ್.ತಿಪ್ಪಣ್ಣ(97) ಸಾರ್ಥಕ ಜೀವನ ನಡೆಸಿ ಶುಕ್ರವಾರ ಬೆಳಗಿನ ಜಾವ ಲಿಂಗೈಕ್ಯರಾಗಿದ್ದು ನಾಡಿಗೆ ಬಹುದೊಡ್ಡ ನಷ್ಟವನ್ನುಂಟು ಮಾಡಿದೆ ಎಂದು ಜಗದ್ಗುರು ಶ್ರೀ ಬಸವಲಿಂಗ ಮಹಾಸ್ವಾಮಿಗಳು ಸಂತಾಪ ಸೂಚಿಸಿದ್ದಾರೆ.

ಆಧ್ಯಾತ್ಮಿಕ, ರಾಜಕೀಯ, ಶೈಕ್ಷಣಿಕ ಹಾಗೂ ಸಾಹಿತ್ಯಿಕ ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆಯು ಅನುಪಮವಾದುದು. ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘದ ಶ್ರಯೋಭಿವೃದ್ಧಿಗೆ ನಿರಂತರವಾಗಿ ಮಾರ್ಗದರ್ಶನ ಮಾಡುತ್ತಾ ಶಿಕ್ಷಣ ಪ್ರೇಮಿಯಾಗಿದ್ದರು. ನಮ್ಮ ಗುರುಗಳೊಂದಿಗೆ ಉತ್ತಮ ಸಂಬಂಧವನ್ನು ಹೊಂದಿ ಮಠದ ಎಲ್ಲ ಯಶಸ್ವಿ ಕಾರ್ಯಗಳಲ್ಲಿ ಜೊತೆಯಾಗಿರುತ್ತಿದ್ದರು. ಮಠದೊಂದಿಗೆ ಒಡನಾಟವನ್ನೂ ಮುಂದುವರೆಸಿಕೊಂಡು ಹಲವಾರು ವಿಚಾರಗಳನ್ನು ಮುಕ್ತ ವಾಗಿ ಚರ್ಚಿಸುತ್ತಿದ್ದಿದು ನಮ್ಮ ಕಣ್ಮುಂದೆ ಹಸಿರಾಗಿದೆ. ಅವರ ಅಗಲಿಕೆ ನಮಗೂ ಮತ್ತು ಅಪಾರ ಅಭಿಮಾನಿಗಳಿಗೆ ದುಃಖ ವನ್ನು ತಂದಿದೆ. ಶ್ರೀ ಜಗದ್ಗುರು ಕೊಟ್ಟೂರೇಶ್ವರರು ಅಗಲಿದ ಆತ್ಮಕ್ಕೆ ಚಿರಶಾಂತಿ ದಯಪಾಲಿಸಲೆಂದು ಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಪ್ರಾರ್ಥಿಸಿದ್ದಾರೆ.

# ಯೂರಿಯಾ ಗೊಬ್ಬರ ಅನಧಿಕೃತ ಶೇಖರಿಸಿಟ್ಟವರ ಮೇಲೆ ಕ್ರಮ – ಡಿಸಿ ಸುರೇಶ ಬಿ. ಇಟ್ನಾಳ

ಮೂರನೇ ಪುಟದಿಂದ
ಪ್ರತಿನಿಧಿಗಳೊಂದಿಗೆ ಗೂಗಲ್ ಮೀಟ್ ಮುಖಾಂತರ ವಿಡಿಯೋ ಸಂವಾದ ನಡೆಸಿ ಮಾತನಾಡಿದರು.

ಕೊಪ್ಪಳ ಜಿಲ್ಲೆಯಲ್ಲಿ ಕೃಷಿ ಅಧಿಕಾರಿಗಳು ಹಾಗೂ ವಿಜಿಲೆನ್ಸ್ ಟೀಂ ನವರು ಹೆಚ್ಚು ಕ್ರೀಯಾತ್ಮಕವಾಗಿ ಕೆಲಸ ಮಾಡಬೇಕು. ಪ್ರಧಾನ ಮಂತ್ರಿ ಫಸಲ್ ವಿಮಾ ಯೋಜನೆ ಕಳೆದ ವರ್ಷ 86 ಸಾವಿರ ರೈತರು ಮಾಡಿಸಿದ್ದು, ಈ ಸಲ ಮಳೆ ಕಡಿಮೆ ಆಗಿರುವುದರಿಂದ ಹೆಚ್ಚಿನ ರೈತರು ಬೆಳೆ ವಿಮೆ ಮಾಡಿಸಲು ಅವರಿಗೆ ಮಾಹಿತಿ ನೀಡಬೇಕು. ಬೆಳೆ ಸಮೀಕ್ಷೆ ಕಾರ್ಯವನ್ನು ಆದಷ್ಟು ಬೇಗನೆ ಜಿಲ್ಲೆಯಲ್ಲಿ ಮಾಡಿಮುಗಿಸಬೇಕೆಂದು ಹೇಳಿದರು.

ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ರುದ್ರೇಶಪ್ಪ ಟಿ ಅವರು ಮಾತನಾಡಿ ಕಳೆದ ವರ್ಷ 16445 ಮೆಟ್ರಿಕ್ ಟನ್ ರಸಗೊಬ್ಬರ ವಿತರಣೆ ಮಾಡಲಾಗಿತ್ತು ಈ ವರ್ಷ 19799 ಮೆಟ್ರಿಕ್ ಟನ್ ರಸಗೊಬ್ಬರ ವಿತರಣೆ ಮಾಡಲಾಗಿದ್ದು, ಇನ್ನೂ 9 ಸಾವಿರ ಮೆಟ್ರಿಕ್ ಟನ್ ರಸಗೊಬ್ಬರ ಸ್ಟಾಕ್ ಇದ್ದು ಜಿಲ್ಲೆಯಲ್ಲಿ ಯಾವುದೇ ರಸಗೊಬ್ಬರದ ಕೊರತೆ ಇಲ್ಲ. ಕಳ್ಳ ಸಂತೆಯಲ್ಲಿ ಅನಧಿಕೃತ ರಸಗೊಬ್ಬರ ಮಾರಾಟ ಮತ್ತು ದಾಸ್ತಾನು ಕಂಡು ಬಂದಲ್ಲಿ ರೈತರು ತಮ್ಮ ಹತ್ತಿರದ ರೈತ ಸಂಪರ್ಕ ಕೇಂದ್ರ ಹಾಗೂ ಕೃಷಿ ಇಲಾಖೆಯ ಜಾಗೃತ ದಳದ ಅಧಿಕಾರಿಗಳಾದ ಸುನಿಲ್ ಕುಮಾರ್ ಫೋನ ನಂಬರ್ 8277932117 ಹಾಗೂ ನಾಗರಾಜ ಫೋನ ನಂಬರ್ 8277932109 ಇವರಿಗೆ ಕರೆ ಮಾಡಿ ದೂರ ನೀಡಬಹುದಾಗಿದ್ದು, ಈ ಸೇವೆ ದಿನದ 24 ಗಂಟೆ ಲಭ್ಯವಿದೆ. ಈಗಾಗಲೇ ಜಿಲ್ಲೆಯಲ್ಲಿ ರಸಗೊಬ್ಬರ ನಿಯಂತ್ರಣ ಕಾಯ್ದೆ ಉಲ್ಲಂಘನೆ ಮಾಡಿದ 2 ರಸಗೊಬ್ಬರಗಳ ಅಂಗಡಿಗಳ ಲೈಸೆನ್ಸ ಅಮಾನತ್ತು ಮಾಡಿದ್ದು ಮತ್ತೆರಡು ಅಂಗಡಿಗಳ ಲೈಸೆನ್ಸಗಳನ್ನು ರದ್ದುಪಡಿಸಲಾಗಿದೆ ಎಂದು ಹೇಳಿದರು.

ಗೂಗಲ್ ಮೀಟ್ ವಿಡಿಯೋ ಸಂವಾದದಲ್ಲಿ ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರಾದ ಕೃಷ್ಣ ಉಕ್ಕುಂದ. ಕೃಷಿ ಇಲಾಖೆಯ ಉಪನಿರ್ದೇಶಕರಾದ ಎಲ್. ಸಿದ್ದೇಶ್ವರ. ಕನಕಗಿರಿ ತಹಶಿಲ್ದಾರ ವಿಶ್ವನಾಥ ಮುರಡಿ ಸೇರಿದಂತೆ ಜಿಲ್ಲೆಯ ಎಲ್ಲಾ ತಾಲ್ಲೂಕಿನ ತಹಶಿಲ್ದಾರರು. ಸಹಾಯಕ ಕೃಷಿ ಅಧಿಕಾರಿಗಳು. ರೈತ ಸಂಪರ್ಕ ಅಧಿಕಾರಿಗಳು. ಇನ್ಸೂರೆನ್ಸ್ ಕಂಪನಿಯ ಹಾಗೂ ಗ್ರಾಮ ಒನ್ ಕೇಂದ್ರದ ಪ್ರತಿನಿಧಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

